ಸಂಚಿಕೆ 11

# ಜಲ ಸಂಪದ

## ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ ವಾರ್ತಾಪತ್ರ

ಜುಲೈ–ಆಗಸ್ಟ್ 2022

ಖಾಸಗಿ ಪ್ರಸಾರಕ್ಕಾಗಿ







## ಈ ಸಂಚಿಕೆಯಲ್ಲಿ


- ವ್ಯವಸ್ಥಾಪಕ ನಿರ್ದೇಶಕರ ಸಂದೇಶ
- ಆರಂಭಿಕ ಹೆಜ್ಜೆಗಳು
- ಸಂಘಗಳ ನೋಂದಣಿ ಮತ್ತು ಒಪ್ಪಂದ ಪತ್ರದ ಚಿತ್ರಣ
- ನಾವೂ ನೀರಿನ ದರ ಸಂಗ್ರಹಣೆ ಮಾಡಿದೆವು!
- ಕಾಡಾ ಕಾಮಗಾರಿಗಳ ವಿವರ
- ಸಂಘಗಳಿಗೆ ಯೋಜನೆಯಲ್ಲಿ ಲಭ್ಯವಿರುವ ಅವಕಾಶಗಳು
- ಸಂಘಗಳಿಗೆ ದಾಖಲೆಗಳ ಮತ್ತು ಲೆಕ್ಕಪತ್ರಗಳ ಪ್ರಾಮುಖ್ಯತೆ
- ಸಹಭಾಗಿತ್ವ ನೀರಾವರಿ ನಿರ್ವಹಣೆ ಹಾಗೂ ಕಾಡಾ ಕಾಮಗಾರಿಗಳ ಕಾರ್ಯಾಗಾರ



## ಸಂದೇಶ

**ಶ್ರೀ ಮಲ್ಲಿಕಾರ್ಜುನ ಗುಂಗೆ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ನೀರಾವರಿ ನಿಗಮ
ನಿಯಮಿತ (ಕೆಎನ್ಎನ್ಎಲ್)
ಬೆಂಗಳೂರು

ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮವು ಒಂದು ವಿನೂತನ ಯೋಜನೆ. ರಾಜ್ಯದಲ್ಲಿ ಕೃಷಿಗೆ ಲಭ್ಯವಿರುವ ನೀರಿನ ಪ್ರಮಾಣವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಗ್ರಾಮೀಣ ಜನರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಕಲ್ಪಿಸುವ ಉದ್ದೇಶವನ್ನು ಇದು ಒಳಗೊಂಡಿದೆ.

ಈ ಕಾರ್ಯಕ್ರಮದ ಭಾಗವಾಗಿ ಎರಡನೇ ಹಂತದಲ್ಲಿ ಮಹತ್ವಾಕಾಂಕ್ಷೆಯ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ. ರಾಜ್ಯದ ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಹರಡಿರುವ 16 ಕಾಲುವೆಗಳು ಮತ್ತು 11 ಅಣೆಕಟ್ಟುಗಳನ್ನು ಈ ಯೋಜನೆಯಡಿ ಪುನಶ್ಚೇತನಗೊಳಿಸುತ್ತಿರುವುದು ವಿಶೇಷ. ಇದಕ್ಕೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವು ನೀಡುತ್ತಿದೆ.

ಮುಖ್ಯ ಕಾಲುವೆಗಳಷ್ಟೇ ಅಲ್ಲದೆ ಹೊಲಗಾಲುವೆಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಕಾಡಾ ಕಾಮಗಾರಿಗಳು ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕವೇ ಕೈಗೊಳ್ಳಲು ಯೋಜಿಸಿರುವುದು ಮತ್ತೊಂದು ವೈಶಿಷ್ಟ್ಯ. ಸಮುದಾಯ ಸಹಭಾಗಿತ್ವದ ನೀರಾವರಿ ನಿರ್ವಹಣೆ ಸಿದ್ಧಾಂತದ ಅಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮುಖ್ಯವಾಗಿ ನೀ.ಬ.ಸ. ಸಂಘಗಳ ರಚನೆ, ಬಲವರ್ಧನೆ ಮಹಿಳೆಯರ ಸಬಲೀಕರಣ, ಸುಸ್ಥಿರ ಕೃಷಿ, ಜೀವನೋಪಾಯ ಇತ್ಯಾದಿ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಇಜಿಐಎಸ್ ಯೋಜನಾ ಸಹಾಯಕ ಸಮಾಲೋಚಕ ತಂಡವು (ಪಿಎಸ್‌ಸಿ 2ಬಿ) ವಿವಿಧ ವಿಷಯಗಳಲ್ಲಿ ನೆರವು ನೀಡುತ್ತಿದೆ.

ಯೋಜನೆಯ ಮಾಹಿತಿ, ಕಲಿಕೆ, ಪ್ರಗತಿ ಹಾಗೂ ಸಮಗ್ರ ಜಲ ಸಂಪನ್ಮೂಲ ಸಂಬಂಧಿತ ವಿಷಯಗಳ ಬಗ್ಗೆ ಜ್ಞಾನವನ್ನು ಪರಸ್ಪರ ಹಂಚಿಕೊಳ್ಳಲು ಈ 'ಜಲಸಂಪದ' ದ್ವೈಮಾಸಿಕ ವಾರ್ತಾಪತ್ರವನ್ನು ಹೊರ ತರುತ್ತಿದ್ದು ಇದರ ಪ್ರಯೋಜನವನ್ನು ಎಲ್ಲರೂ ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.



## ಮಾನ್ಯ ಸಚಿವರಿಂದ ವಿಜಯನಗರ ಕಾಲುವೆಗಳ ಪರಿಶೀಲನೆ

ದಿನಾಂಕ 16ನೇ ಏಪ್ರಿಲ್ 2022ರಂದು, ಶ್ರೀ ಗೋವಿಂದ ಎಂ. ಕಾರಜೋಳ, ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಕರ್ನಾಟಕ ಸರ್ಕಾರ, ಇವರು ವಿಜಯನಗರ ಕಾಲುವೆಗಳ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ರಾಯ ಕಾಲುವೆ ಹಾಗೂ ಬಸವಣ್ಣ ಕಾಲುವೆಗಳ ಆಧುನೀಕರಣ ಕಾಮಗಾರಿಗಳು ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಗುಣಮಟ್ಟ ಮತ್ತು ಪ್ರಗತಿಯನ್ನು ಪರಿಶೀಲಿಸಿದರು.

ನೀರಾವರಿ ಕೇಂದ್ರ ವಲಯದ ಮುಖ್ಯ ಇಂಜಿನಿಯರ್ ಶ್ರೀ ಕೃಷ್ಣಾಜಿ ಚವ್ಹಾಣ, ತುಂಗಭದ್ರಾ ಜಲಾಶಯ ವಿಭಾಗ 1ರ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್ ಮತ್ತು ಇತರ ಇಂಜಿನಿಯರುಗಳು ಹಾಗೂ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಯೋಜನೆಯ ಪ್ರಗತಿಯ ಬಗ್ಗೆ ಮಾಹಿತಿ ನೀಡಿದರು.

# ಸಂಪಾದಕೀಯ



**ಶ್ರೀ ದುರುಗಪ್ಪ ಕೆ.**
ಮುಖ್ಯ ಇಂಜಿನಿಯರ್,
ನೀರಾವರಿ ಕೇಂದ್ರ ವಲಯ,
ಮುನಿರಾಬಾದ್

ನೀರಾವರಿ ಕಾಲುವೆಗಳು ಕೃಷಿಕರ ಮತ್ತು ಗ್ರಾಮೀಣ ಜನರ ಜೀವನಾಡಿಗಳು" ಎಂಬ ಮಾತು ಅಕ್ಷರಶಃ ಸತ್ಯ. ನದಿಗಳಿಗೆ ಅಣೆಕಟ್ಟು ನಿರ್ಮಿಸಿ ಕಾಲುವೆಗಳ ಮೂಲಕ ನೀರು ಹಾಯಿಸುವ ವಿಧಾನವನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಸಮುದಾಯಗಳು, ರಾಜರು, ಪಾಳೆಯಗಾರರು ಅಳವಡಿಸಿಕೊಂಡಿದ್ದರು. ಕಾವೇರಿ, ಘಟಪ್ರಭಾ, ಯಗಚಿ, ತುಂಗಭದ್ರ ನದಿಗಳಲ್ಲಿ ಅಂತಹ ಪ್ರಾಚೀನ ಕಾಲುವೆ ನೀರಾವರಿಗಳ ಕುರುಹುಗಳನ್ನು ಈಗಲೂ ಕಾಣಬಹುದು. ಇವುಗಳಲ್ಲಿ ಅತ್ಯಂತ ಮಹತ್ವವಾದುದು ಮತ್ತು ಈಗಲೂ ಉಪಯೋಗಿಸಲ್ಪಡುತ್ತಿರುವುದು ನಮ್ಮ ವಿಜಯನಗರ ಕಾಲದ ಕಾಲುವೆ ನೀರಾವರಿ ವ್ಯವಸ್ಥೆ. ಹೊಸಪೇಟೆಯಿಂದ ರಾಯಚೂರುವರೆಗೆ ನಾಲ್ಕು ಜಿಲ್ಲೆಗಳಲ್ಲಿ ಈ ವ್ಯವಸ್ಥೆ ಹಬ್ಬಿದ್ದು, 16 ಕಾಲುವೆಗಳು ಮತ್ತು 12 ಅಣೆಕಟ್ಟುಗಳು ಬರುತ್ತವೆ. ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದ ಈ ಕಾಲುವೆ ಮತ್ತು ಅಣೆಕಟ್ಟುಗಳನ್ನು 2019ರಿಂದ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಆರ್ಥಿಕ ನೆರವಿನಲ್ಲಿ ಪುನಶ್ಚೇತನಗೊಳಿಸಲಾಗುತ್ತಿದೆ. ಕರ್ನಾಟಕ ನೀರಾವರಿ ನಿಗಮ ಹಾಗೂ ತುಂಗಭದ್ರಾ ಕಾಡಾ ಪ್ರಾಧಿಕಾರ ಇದರಲ್ಲಿ ಪ್ರಮುಖ ಪಾತ್ರವಹಿಸಿದ್ದು, ಯೋಜನಾ ಸಮಾಲೋಚಕ ತಂಡವಾಗಿ ಇಜಿಐಎಸ್ ಇಂಡಿಯಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಪ್ರೈ., ಲಿಮಿಟೆಡ್ ಕಾರ್ಯನಿರ್ವಹಿಸುತ್ತಿದೆ. ಆರ್.ಎನ್.ಎಸ್ ಇನ್ಫ್ರಾಸ್ಟ್ರಕ್ಚರ್ ಕಂಪನಿಯು ವಿಜಯನಗರದ ರಾಯ, ಬಸವಣ್ಣ, ಬೆಲ್ಲಾ, ಕಾಳಘಟ್ಟ, ರಾಮಸಾಗರ, ಕಂಪ್ಲಿ, ಬೆಳಗೋಡಹಾಳ್, ಸಿರುಗುಪ್ಪ, ದೇಶನೂರು, ಹುಲಿಗಿ, ಶಿವಪುರ, ಆನೆಗುಂದಿ, ಗಂಗಾವತಿ ಮೇಲಣ ಮತ್ತು ಗಂಗಾವತಿ ಕೆಳಗಣ ಹಾಗೂ ಬಿಚ್ಚಾಲಿ ಕಾಲುವೆಗಳು ಮತ್ತು ಇದರೊಂದಿಗೆ ದೇಶನೂರು, ಜೂಕೂರು (ಬಿಚ್ಚಾಲಿ) ಹಾಗೂ ಸಿರುಗುಪ್ಪ ಅಣೆಕಟ್ಟುಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ.

ಈ ಯೋಜನೆಯ ಮಹತ್ವದ ಭಾಗವಾಗಿ ಸಹಭಾಗಿತ್ವ ನೀರಾವರಿ ನಿರ್ವಹಣೆ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳ (ನೀ.ಬ.ಸ.ಸಂ) ಮೂಲಕ ಹೊಲಗಾಲುವೆಗಳ ಅಥವಾ ಕಾಡಾ ಕಾಮಗಾರಿಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ನೀ.ಬ.ಸ. ಸಂಘಗಳಿಗೆ ಅಗತ್ಯವಾಗಿ ಬೇಕಾದ ಮೂಲಭೂತ ಸೌಕರ್ಯಗಳಾದ ಸ್ವಂತ ಕಛೇರಿ ಕಟ್ಟಡ, ಪೀಠೋಪಕರಣ, ತರಬೇತಿ ಇತ್ಯಾದಿಗಳನ್ನು ಒದಗಿಸುವುದೂ ಸಹ ಮುಖ್ಯ ಚಟುವಟಿಕೆಗಳಾಗಿವೆ. ಈಗಾಗಲೇ ಆನೆಗುಂದಿ ಕಾಲುವೆಯ ಸಂಗಾಪುರ ನೀ.ಬ.ಸ. ಸಂಘದ ಕಾಡಾ ಕಾಮಗಾರಿ ಬಗ್ಗೆ ಪ್ರಾಯೋಗಿಕವಾಗಿ ವಿನ್ಯಾಸಗಳು ಹಾಗೂ ಕ್ರಿಯಾ ಯೋಜನೆ ಒಪ್ಪಂದ ಪತ್ರವನ್ನು ಸಿದ್ಧಪಡಿಸಿದ್ದು ಎಡಿಬಿ ಅನುಮೋದನೆಗಾಗಿ ಕಳುಹಿಸಲಾಗಿದೆ.



ಇನ್ನು, ಪ್ರಸ್ತುತ ಜಲಸಂಪದ ಸಂಚಿಕೆಯ ಬಗ್ಗೆ ಹೇಳುವುದಾದರೆ, ಈ ಸಲ ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಕಾಡಾ ಕಾಮಗಾರಿಗಳ ಬಗ್ಗೆ ವಿಶೇಷ ಆದ್ಯತೆ ನೀಡಿ ಲೇಖನಗಳನ್ನು ಸಿದ್ಧಪಡಿಸಲಾಗಿದೆ. ಇದರ ಸದುಪಯೋಗಪಡಿಸಿಕೊಳ್ಳಿ ಮತ್ತು ಓದಿ ತಮ್ಮ ಅಭಿಪ್ರಾಯ ತಿಳಿಸಿ.

## ಸಂಘಗಳಿಗೆ ಕರೆ



**ಶ್ರೀ ರಮೇಶ್ ರಾಥೋಡ್**
ಆಡಳಿತಾಧಿಕಾರಿಗಳು
(ಪ್ರಭಾರ), ತುಂಗಭದ್ರಾ ಕಾಡಾ,
ಮುನಿರಾಬಾದ್

ನಮ್ಮ ನೀರು ಬಳಕೆದಾರರ ಸಹಕಾರ ಸಂಘಗಳು ದೂರದೃಷ್ಟಿ, ಉತ್ತಮ ನಾಯಕತ್ವ ಹಾಗೂ ಸಾಮೂಹಿಕ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸುವ ಸಂಘಟನೆಗಳಾಗಿವೆ. ತಮ್ಮ ಅಚ್ಚುಕಟ್ಟು ವ್ಯಾಪ್ತಿಯ ಅಭಿವೃದ್ಧಿಯೇ ಇವುಗಳ ಧ್ಯೇಯ. ಸದರಿ ಸಂಘಗಳು, ತಮ್ಮ ಹಕ್ಕು ಮತ್ತು ಜವಾಬ್ದಾರಿಗಳನ್ನು ನೈಜವಾಗಿ ಅರ್ಥೈಸಿಕೊಂಡು ಕರ್ತವ್ಯ ನಿರ್ವಹಿಸಿದರೆ, ಅವು ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯಗಳಿರುವುದಿಲ್ಲ. ಅಂತಹ ಹಲವು ಉದಾಹರಣೆಗಳಿವೆ.

ಪ್ರಸ್ತುತ ವಿ.ಎನ್.ಸಿ ಯೋಜನಾ ವ್ಯಾಪ್ತಿಯ ನೀ.ಬ.ಸ. ಸಂಘಗಳಿಗೆ ತಮ್ಮ ಸರ್ವತೋಮುಖ ಅಭಿವೃದ್ಧಿಗಾಗಿ ಈಗ ಒಂದು ಸದವಕಾಶ ಒದಗಿಬಂದಿದೆ. ಯೋಜನೆಯಲ್ಲಿ ವಿಜಯನಗರ ಮುಖ್ಯ ಕಾಲುವೆ ಹಾಗೂ ಅಚ್ಚುಕಟ್ಟು ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮ, ಕಾಡಾ ಹಾಗೂ ಯೋಜನಾ ಸಹಾಯಕ ಸಮಾಲೋಚಕ ತಂಡವು ಶ್ರಮಿಸಲಿವೆ. ಈ ಪ್ರಕ್ರಿಯೆಯಲ್ಲಿ ನೀ.ಬ.ಸ.ಸಂಘಗಳು ಕ್ರಿಯಾಶೀಲವಾಗಿ ಕೈಜೋಡಿಸಿದಲ್ಲಿ ಯೋಜನೆಯು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಜೊತೆಗೆ ಇದರ ಫಲ ಎಲ್ಲರಿಗೂ ದೊರೆಯಲಿದೆ. ಸಂಘಗಳ ಸ್ಥಾಪನೆ, ಬಲವರ್ಧನೆ, ಅವುಗಳು ಶಾಸನಬದ್ಧವಾಗಿ ನಿರ್ವಹಿಸಬೇಕಾದ ಗುರುತರ ಕರ್ತವ್ಯಗಳು, ಸಂಘಗಳ ಅಧ್ಯಕ್ಷರು ಹಾಗೂ ವಿವಿಧ ಪದಾಧಿಕಾರಿಗಳ ಹಾಗೂ ಸದಸ್ಯರ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇತ್ಯಾದಿಗಳ ಕುರಿತು ಯೋಜನೆಯ ತಜ್ಞರುಗಳು, ಸಮುದಾಯ ಸಂಘಟಕರು, ಕೃಷಿ ಹಾಗೂ ನೀರಾವರಿ ಕ್ಷೇತ್ರದಲ್ಲಿ ನುರಿತ ಸಿಬ್ಬಂದಿಗಳು ಮಾಹಿತಿ ನೀಡಲಿದ್ದಾರೆ. ಈ ಯೋಜನೆಯ ಯಶಸ್ಸು ನಮ್ಮ ನಿಮ್ಮೆಲ್ಲರ ಹೊಣೆಯಾಗಿರುತ್ತದೆ.

# ಮಕ್ಕಳಿಗೆ ಪ್ರಬಂಧ ಸ್ಪರ್ಧೆ

ವಿಜಯನಗರ ಅರಸರು ಹಂಪಿಯಿಂದ ಮಂತ್ರಾಲಯದವರೆಗೆ ತುಂಗಭದ್ರಾ ನದಿಗೆ ಹತ್ತಾರು ಅಣೆಕಟ್ಟುಗಳನ್ನು ನಿರ್ಮಿಸಿದ್ದಾರೆ. ಈ ನೀರನ್ನು ಕಾಲುವೆಗಳ ಮೂಲಕ ಹಾಯಿಸಿ ಕೃಷಿ, ನೀರಾವರಿ, ಕುಡಿಯುವ ನೀರು, ಧಾರ್ಮಿಕ ಕಾರ್ಯಗಳು, ಸೈನಿಕರಿಗೆ ನೀರೊದಗಿಸಲು ಬಳಸಲಾಗುತ್ತಿತ್ತು. ಈ ಅಣೆಕಟ್ಟು ಮತ್ತು ಕಾಲುವೆಗಳನ್ನು ಪ್ರಸ್ತುತ ಪುನಶ್ಚೇತನಗೊಳಿಸುವ ಕೆಲಸ ನಡೆಯುತ್ತಿದೆ. ಈ ಅಪರೂಪದ ನೀರಾವರಿ ಜಾಲದ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುವ ದೃಷ್ಟಿಯಿಂದ ಪ್ರಬಂಧ ಸ್ಪರ್ಧೆ ಏರ್ಪಡಿಸಲು ಯೋಜನಾ ಅನುಷ್ಠಾನ ಘಟಕ (ಕೆ.ಎನ್.ಎನ್.ಎಲ್) ಕಾಡಾ ಹಾಗೂ ಯೋಜನಾ ಸಮಾಲೋಚಕ ತಂಡವು ಕಾರ್ಯಕ್ರಮ ಹಮ್ಮಿಕೊಂಡಿದೆ.



### ಸ್ಪರ್ಧೆಯ ಉದ್ದೇಶಗಳು:

- ಶತಮಾನಗಳಷ್ಟು ಹಳೆಯದಾದ ವಿಜಯನಗರ ನೀರಾವರಿ ವ್ಯವಸ್ಥೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು;
- ಪಾರಂಪರಿಕ ನೀರು ನಿರ್ವಹಣೆ ವಿಧಾನಗಳ ಪರಿಚಯ ಮಾಡಿಸುವುದು;
- ಮಕ್ಕಳಲ್ಲಿ ಈ ಅಣೆಕಟ್ಟು ಮತ್ತು ಕಾಲುವೆಗಳ ಸ್ವಚ್ಛತೆ ಮತ್ತು ರಕ್ಷಣೆ ಬಗ್ಗೆ ತಿಳಿವಳಿಕೆ ಬರುವಂತೆ ಮಾಡುವುದು;

- ಈ ಕಾಲುವೆಗಳನ್ನು ನಿರ್ಮಿಸಿದ ವಿಜಯನಗರ ಹಾಗೂ ಇತರ ಅರಸರ ಬಗ್ಗೆ ಮಕ್ಕಳಿಗೆ ಮಾಹಿತಿ ಒದಗಿಸುವುದು.

ಆರಂಭಿಕ ಪ್ರಯತ್ನವಾಗಿ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 20.8.2022ರಂದು ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಶಾಲಾ ಮುಖ್ಯ ಶಿಕ್ಷಕರಾದ ಶ್ರೀ ಜಿ.ಬಸಪ್ಪನವರು ಹಾಗೂ ಇತರ ಶಿಕ್ಷಕರು ಈ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸಿ ಸೂಕ್ತ ಸಹಕಾರವನ್ನೂ ನೀಡಿರುತ್ತಾರೆ. ಶಾಲೆಯ 7 ಮತ್ತು 8ನೇ ತರಗತಿಯ 30 ಮಕ್ಕಳು ಉತ್ಸಾಹದಿಂದ ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು, ಪ್ರಬಂಧಗಳನ್ನು ಸಲ್ಲಿಸಿರುತ್ತಾರೆ. ಶಾಲಾ ಮಕ್ಕಳನ್ನು ಈ ನಿಟ್ಟಿನಲ್ಲಿ ಉತ್ತೇಜಿಸಲು ಉತ್ತಮ ಅಂಕ ತೆಗೆದು ವಿಜೇತರಾದ ಮೊದಲ ಐದು ಪ್ರಬಂಧಗಳಿಗೆ ಬಹುಮಾನ ನೀಡಿ ಪುರಸ್ಕರಿಸಲಾಗುವುದು.

---

## ರೈತರಿಗೆ ಕರೆ



**ಶ್ರೀ ದೊರೈಸ್ವಾಮಿ ಆರ್.**
ಟೀಮ್ ಲೀಡರ್,
ಯೋಜನಾ ಸಹಾಯಕ
ಸಮಾಲೋಚಕ ತಂಡ
ಇ.ಜಿ.ಐ.ಎಸ್



ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 191.71 ದ.ಲ. ಹೆಕ್ಟೇರ್. ಇದರಲ್ಲಿ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯು ಶೇಕಡ 11.88 ರಷ್ಟು ಆಗಿರುತ್ತದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮಾಹಿತಿಯಂತೆ 2019–20ರಲ್ಲಿ ಮೇಲ್ಮೈ ನೀರಿನ ಮೂಲಗಳಿಂದ (ಕಾಲುವೆ, ಕೆರೆಗಳು, ತೆರೆದ ಬಾವಿಗಳು, ಏತ ನೀರಾವರಿ) ನೀರಾವರಿಯಾದ ನಿವ್ವಳ ಭೌಗೋಳಿಕ ವಿಸ್ತೀರ್ಣ 18.11 ಲ.ಹೆ.ಗಳು ಹಾಗೂ ಕೊಳವೆ ಬಾವಿಯಿಂದ ನೀರಾವರಿಯಾದ ನಿವ್ವಳ ಭೌಗೋಳಿಕ ವಿಸ್ತೀರ್ಣ 18.63 ಲ.ಹೆ.ಗಳು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮೇಲ್ಮೈ ನೀರಾವರಿ ಸೌಲಭ್ಯಗಳನ್ನು ಒದಗಿಸುವಲ್ಲಿ ಹೂಡಿಕೆಯು ಬಹುತೇಕ ಸರ್ಕಾರದ್ದಾಗಿದ್ದು, ಕೊಳವೆ ಬಾವಿಗಳ ಸವಲತ್ತು ಪಡೆಯಲು ರೈತರು ಬಹುತೇಕ ತಮ್ಮ ಸ್ವಂತ ಹೂಡಿಕೆ ಮಾಡಿರುತ್ತಾರೆ.

ಇಲ್ಲಿ, ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ನಿವ್ವಳ ಬಿತ್ತನೆಯಾದ ಕೃಷಿ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಇರುವ ವಿಸ್ತೀರ್ಣವು ಶೇ. 39.2 ಆಗಿರುತ್ತದೆ. ಅಂದರೆ ರಾಜ್ಯದ ಸಮಗ್ರ ಕೃಷಿ ದೃಷ್ಟಿಕೋನದಿಂದ ನೋಡಿದಾಗ ಶೇ 60.8 ರಷ್ಟು ಬಿತ್ತನೆಯಾದ ನಿವ್ವಳ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿರುವುದಿಲ್ಲ. ಇದರ ಅರ್ಥ, ಶೇ 60.8 ರಷ್ಟು ಭೂಮಿಗೆ ನೀರಾವರಿ ಕಲ್ಪಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಕಾಲುವೆ ನೀರಾವರಿ ಸೌಲಭ್ಯ ಪಡೆಯುತ್ತಿರುವ ರೈತರಾದ ನಮ್ಮನ್ನು, ನೀರಾವರಿ ಸೌಲಭ್ಯದಿಂದ ವಂಚಿತರಾಗಿರುವ ರೈತರೊಡನೆ ಹೋಲಿಸಿಕೊಂಡಾಗ ನಾವೇ ಸುದೈವಿಗಳಲ್ಲವೇ?

ಈ ಹಿನ್ನೆಲೆಯಲ್ಲಿ, ಸರ್ಕಾರವು ಹೂಡಿಕೆ ಮಾಡಿ ನಿರ್ಮಿಸಿರುವ ಈ ಕಾಲುವೆ ಜಾಲಗಳನ್ನು ಸುಸ್ಥಿರವಾಗಿ ನಿರ್ವಹಿಸುವುದು ನಮ್ಮೆಲ್ಲರ ಜವಾಬ್ದಾರಿ, ಹಾಗೂ ಈ ನೀರಾವರಿ ಸಂಪತ್ತನ್ನು ಮುಂದಿನ ಪೀಳಿಗೆಗೆ ಒಳ್ಳೆಯ ಗುಣಮಟ್ಟದಲ್ಲಿ ಕೊಂಡೊಯ್ಯುವ ಹೊಣೆಗಾರಿಕೆಯೂ ನಮ್ಮದಲ್ಲವೇ? ಈಗಲೂ ಕಾಲ ಮೀರಿಲ್ಲ, ಮೀರುವುದಕ್ಕಿಂತ ಮುಂಚೆ ಬನ್ನಿ, ಎಲ್ಲರೂ ಸಹಕರಿಸೋಣ, ನಮ್ಮ ನೀರಾವರಿ ಸಂಪತ್ತನ್ನು ಪರಿಣಾಮಕಾರಿಯಾಗಿ ಬಳಸೋಣ ಹಾಗೂ ಸುಸ್ಥಿರವಾಗಿ ನಿರ್ವಹಿಸೋಣ.

***ಸಹಕಾರಂ ಗೆಲ್ಗೆ, ಕೃಷಿತೋ ನಾಸ್ತಿ ದುರ್ಭಿಕ್ಷಂ.***

**ನೀರಾವರಿ ವಿಸ್ತೀರ್ಣ ಮತ್ತು ಮೂಲಗಳ ಕೋಷ್ಟಕ**

| ಕ್ರ.ಸಂ | ನೀರಾವರಿ ಮೂಲ | ನೀರಾವರಿಯಾದ ಒಟ್ಟು ವಿಸ್ತೀರ್ಣ (ಹೆ.) | ನೀರಾವರಿಯಾದ ನಿವ್ವಳ ವಿಸ್ತೀರ್ಣ (ಹೆ.) |
|---|---|---|---|
| 1 | ಕಾಲುವೆ | 14,03,773 | 12,61,769 |
| 2 | ಕೆರೆಗಳು | 1,74,171 | 1,38,464 |
| 3 | ತೆರೆದ ಬಾವಿಗಳು | 3,80,729 | 3,21,841 |
| 4 | ಕೊಳವೆ ಬಾವಿಗಳು | 22,42,942 | 18,63,111 |
| 5 | ಏತ ನೀರಾವರಿ | 1,15,620 | 89,012 |
| 6 | ಇತರೆ ಮೂಲಗಳು | 7,17,109 | 5,60,601 |
| | **ಒಟ್ಟು** | **50,34,344** | **42,34,798** |

# ಆರಂಭಿಕ ಹೆಜ್ಜೆಗಳು

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಗೆ ಯೋಜನಾ ಸಮಾಲೋಚಕ ತಂಡವಾಗಿ ಇಜಿಐಎಸ್ ಇಂಡಿಯಾ ಕನ್ಸಲ್ಟಿಂಗ್ ಇಂಜಿನಿಯರಿಂಗ್ ಕಂಪನಿಯು ನಿಯೋಜನೆಗೊಂಡಿದೆ. ಜುಲೈ 2022ರಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಆರಂಭಿಸಿದ್ದು ಹೊಸಪೇಟೆಯಲ್ಲಿ ಯೋಜನಾ ಮುಖ್ಯ ಕಛೇರಿಯನ್ನು ಹೊಂದಿದೆ. ಜೊತೆಗೆ ಗಂಗಾವತಿ, ಕಂಪ್ಲಿ ಮತ್ತು ಕಮಲಾಪುರಗಳಲ್ಲಿ ಎಸ್.ಎಸ್.ಟಿ (ಸಪೋರ್ಟ್ ಸರ್ವೀಸ್ ಟೀಮ್) ಕ್ಷೇತ್ರ ಕಛೇರಿಗಳನ್ನು ತೆರೆಯಲಾಗಿದೆ. ಜುಲೈ ತಿಂಗಳಲ್ಲೇ ಟೀಮ್ ಲೀಡರ್, ಡೆಪ್ಯುಟಿ ಟೀಮ್ ಲೀಡರ್, ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ವಿವಿಧ ವಿಷಯ ತಜ್ಞರುಗಳು ಹಾಗೂ ಕಛೇರಿ ಸಿಬ್ಬಂದಿಗಳನ್ನು ಕಂಪನಿಯು ಸನ್ನದ್ಧಗೊಳಿಸಿದೆ.

18ನೇ ಜುಲೈ 2022ರಂದು ಮುಖ್ಯ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ ನೀರಾವರಿ ಕೇಂದ್ರ ವಲಯ, ಮುನಿರಾಬಾದ್‌ನ ಅವರ ಕಛೇರಿಯಲ್ಲಿ ನಡೆದ ಆರಂಭಿಕ ಸಭೆಯಲ್ಲಿ (ಕಿಕ್‌ಆಫ್ ಮೀಟಿಂಗ್) ಭಾಗವಹಿಸಲಾಯಿತು. ಇದರ ಮುಂದುವರಿಕೆಯಾಗಿ ವಿಜಯನಗರ ಕಾಲುವೆಗಳ ಆಧುನೀಕರಣಕ್ಕೆ ಸಂಬಂಧಿಸಿದ ನೀ.ಬ.ಸ.ಸಂ.ಗಳ ಬಲವರ್ಧನೆ, ವಿ.ಎನ್.ಸಿ ಕಾಮಗಾರಿ, ನೀ.ಬ.ಸ.ಸಂ.ದ ವತಿಯಿಂದ ಕೈಗೊಳ್ಳುವ ಕಾಡಾ ಕಾಮಗಾರಿ, ಸುಸ್ಥಿರ ಕೃಷಿ ಕಾರ್ಯಕ್ರಮ, ಓ&ಎಮ್, ಪರಿಸರ ಮತ್ತು ಸಾಮಾಜಿಕ



ಸುರಕ್ಷಾ ವಿಧಾನಗಳು, ವಿವಿಧ ಸಾಂಸ್ಥಿಕ ಹಣಕಾಸು ನಿರ್ವಹಣೆ, ಪ್ರೊಕ್ಯೂರ್‌ಮೆಂಟ್, ತರಬೇತಿ ಕಾರ್ಯಕ್ರಮ, ಮಾಹಿತಿ ಸಂವಹನ, ಅಧ್ಯಯನ ಪ್ರವಾಸ ಇತ್ಯಾದಿ ಹಲವಾರು ವಿಷಯಗಳಲ್ಲಿ ಕಾರ್ಯಪ್ರವೃತ್ತವಾಗಿದೆ.

ಈ ಸಂಬಂಧವಾಗಿ ಯೋಜನಾ ಅನುಷ್ಠಾನ ಕಛೇರಿಯ ಇಂಜಿನಿಯರುಗಳು (ಕೆ.ಎನ್.ಎನ್.ಎಲ್), ಕಾಡಾ ಅಧಿಕಾರಿಗಳು, ರೈತರು, ನೀ.ಬ.ಸ.ಸಂ.ಗಳ ಪ್ರತಿನಿಧಿಗಳು, ಮಹಿಳೆಯರು, ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಮುಖ್ಯಸ್ಥರು ಮತ್ತು ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ (ರೈಸ್ ಬ್ರೀಡಿಂಗ್ ಸೆಂಟರ್) ಗಂಗಾವತಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಗುತ್ತಿಗೆದಾರರು, ಗುಣಮಟ್ಟ ಖಾತರಿ ಸಮಾಲೋಚಕರು ಮುಂತಾದವರೊಡನೆ ಸಮಾಲೋಚಿಸಿ, ಯೋಜನೆಯು ಸಮಗ್ರ ಅಭಿವೃದ್ಧಿ



ಹೊಂದಲು ಮುಂದಿನ ರೂಪುರೇಷೆಯನ್ನು ಸಿದ್ದಪಡಿಸಿಲಾಗುತ್ತಿದೆ. ತಂಡದ ವಿವಿಧ ತಜ್ಞರು, ಕೆ.ಎನ್.ಎನ್.ಎಲ್ ಇಂಜಿನಿಯರ್‌ಗಳೊಡನೆ ಆನೆಗುಂದಿ, ರಾಮಸಾಗರ, ಕಂಪ್ಲಿ, ದೇಶನೂರು, ಸಿರುಗುಪ್ಪ, ಹುಲಿಗಿ ಮತ್ತು ಬಿಚ್ಚಾಲಿ ಕಾಲುವೆಗಳ ಸಿವಿಲ್ ಕಾಮಗಾರಿಗಳ ಪರಿಶೀಲನೆ ಸಹ ನಡೆಸಲಾಗಿದೆ.

ಜೊತೆಗೆ, ನೀ.ಬ.ಸ.ಸಂ.ಗಳ ರಚನೆಯು ವಿವಿಧ ಹಂತಗಳಲ್ಲಿ ಇರುವುದನ್ನು ಗಮನಿಸಲಾಯಿತು. ಅಚ್ಚುಕಟ್ಟು ಪ್ರದೇಶದಲ್ಲಿ 19 ಸಂಘಗಳು ನೋಂದಣಿಯಾಗಿದ್ದು, ಇದರಲ್ಲಿ 13 ಸಂಘಗಳು ಒಪ್ಪಂದ ಪತ್ರವನ್ನು ಮಾಡಿಕೊಂಡಿದ್ದವು; 4 ಸಂಘಗಳ ರಚನೆಗೆ ಅಧಿಸೂಚನೆ ಹೊರಡಿಸುವುದು ಬಾಕಿ ಇತ್ತು, ಅಧಿಸೂಚನೆ ಹೊರಡಿಸಿದ್ದರೂ 10 ಸಂಘಗಳು ನೋಂದಣಿ ಆಗಿರಲಿಲ್ಲ. 11 ಸಂಘಗಳಲ್ಲಿ ಆಡಳಿತ ಮಂಡಳಿ ಚುನಾವಣೆ ನಡೆಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿ.ಎನ್.ಸಿ ಯಲ್ಲಿ ಗುರುತಿಸಿರುವ 29 ನೀ.ಬ.ಸ.ಸಂ.ಗಳನ್ನು ಏಕರೀತಿಯಲ್ಲಿ ಅಭಿವೃದ್ಧಿಗೊಳಿಸಲು, ಆಯಾ ಸಂಘದ ಸ್ಥಿತಿ-ಗತಿಗನುಗುಣವಾಗಿ ಕ್ರಿಯಾ ಯೋಜನೆ ರೂಪಿಸಿ ಹೆಚ್ಚಿನ ಶ್ರಮ ವಹಿಸಲಾಗುತ್ತಿದೆ. ಇದರ ಪರಿಣಾಮವಾಗಿ ಪಿ.ಐ.ಓ ಸಹಕಾರದೊಂದಿಗೆ 4 ಸಂಘಗಳ ಅಧಿಸೂಚನೆ ಹೊರಡಿಸುವ ಕಾರ್ಯ ಕೈಗೊಳ್ಳಲಾಯಿತು. ಇದರೊಂದಿಗೆ 4 ಸಂಘಗಳೊಡನೆ ಎಂ.ಓ.ಯು ಸಹ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಈ ಸಂಚಿಕೆಯಲ್ಲಿನ ವಿವಿಧ ಲೇಖನಗಳಲ್ಲಿ ಗಮನಿಸಬಹುದು.

ಹೀಗೆ ಯೋಜನಾ ಸಮಾಲೋಚಕ ತಂಡವು ಆರಂಭದ ಎರಡು ತಿಂಗಳುಗಳಲ್ಲಿ ತನ್ನ ಸದೃಢ ಹೆಜ್ಜೆಗಳನ್ನು ಇಟ್ಟಿದೆ.

# ಸಂಘಗಳ ನೋಂದಣಿ ಮತ್ತು ಒಪ್ಪಂದ ಪತ್ರದ ಚಿತ್ರಣ

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಯೋಜನಾ ಸಹಾಯಕ ಸಮಾಲೋಚಕ ತಂಡವು, ಯೋಜನಾ ಅನುಷ್ಠಾನ ಘಟಕದ ಸಹಕಾರದೊಂದಿಗೆ, ವಿ.ಎನ್.ಸಿ ವ್ಯಾಪ್ತಿಯ ಎಲ್ಲಾ ಸಂಘಗಳ ಸ್ಥಿತಿ-ಗತಿಯನ್ನು ಅವಲೋಕನ ಮಾಡಿತು. ಎಲ್ಲಾ ಸಂಘಗಳನ್ನೂ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಕ್ರಿಯಾ ಯೋಜನೆಯನ್ನು ರೂಪಿಸಿ, ಅದರ ಭಾಗವಾಗಿ ಈ ಅವಧಿಯಲ್ಲಿ ವಿ.ಎನ್.ಸಿ ಯೋಜನಾ ವ್ಯಾಪ್ತಿಯ ಬಲದಂಡೆ ಭಾಗದಲ್ಲಿ ಸಂಘಗಳ ನೋಂದಣಿ ಹಾಗೂ ಕೆ.ಎನ್.ಎನ್.ಎಲ್.ನೊಂದಿಗೆ ಒಪ್ಪಂದ ಪತ್ರಮಾಡಿಕೊಳ್ಳುವ ಕೆಲಸ ನಿರ್ವಹಿಸಲಾಗಿದ್ದು, ಅದರ ವಿವರಗಳು ಹೀಗಿವೆ;

1. ಬೆಲ್ಲಾ ಕಾಲುವೆಗೆ ಸಂಬಂಧಪಟ್ಟ ಹೊಸೂರು ಮತ್ತು ನರಸಾಪುರ ನೀ.ಬ.ಸ.ಸಂ.ಗಳ ನೋಂದಣಿಗೆ ಅಧಿಸೂಚನೆ ಆಗಿರುತ್ತದೆ.

2. ತುರ್ತಾ ಕಾಲುವೆಗೆ ಸಂಬಂಧಪಟ್ಟ ಕಡ್ಡಿರಾಂಪುರ ಮತ್ತು ಬುಕ್ಕಸಾಗರ ನೀ.ಬ.ಸ.ಸಂ.ಗಳ ನೋಂದಣಿಗೆ ಅಧಿಸೂಚನೆ ಪೂರಕ ಪ್ರಕ್ರಿಯೆ ಆಗಿರುತ್ತದೆ.

3. ಬೆಳಗೋಡಹಾಳ್, ನಂ. 10 ಮುದ್ದಾಪುರ, ಮಲಪನಗುಡಿ ಮತ್ತು ಕಾಳಘಟ್ಟ ಸಂಘಗಳು ಕರ್ನಾಟಕ ನೀರಾವರಿ ನಿಗಮದೊಂದಿಗೆ ಒಪ್ಪಂದ ಪತ್ರಮಾಡಿಕೊಳ್ಳಲು ಯೋಜನಾ ಸಮಾಲೋಚಕ ತಂಡದ ಸಿಬ್ಬಂದಿಗಳು ಸುಗಮಗಾರಿಕೆ ಮಾಡಿರುತ್ತಾರೆ.

4. ಬಿಚ್ಚಾಲಿ, ಹುಲಿಗಿ ಮತ್ತು ಮಲಪನಗುಡಿ ನೀ.ಬ.ಸ.ಸಂಘಗಳು ಸ್ವಂತ ಕಛೇರಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ನಿವೇಶನಗಳನ್ನು ಮಂಜೂರು ಮಾಡಿಸಿಕೊಂಡಿವೆ.

5. ಕಾಳಘಟ್ಟ, ರಾಮಸಾಗರ, ದೇಶನೂರು ಮತ್ತು ಬೆಳಗೋಡಹಾಳ್ ನೀ.ಬ.ಸ.ಸಂಘಗಳು ನಿವೇಶನ ಒದಗಿಸುವಂತೆ ಆಯಾ ಗ್ರಾಮ ಪಂಚಾಯ್ತಿಗಳಿಗೆ ಮನವಿ ಸಲ್ಲಿಸಿವೆ.

6. ನಂ. 10 ಮುದ್ದಾಪುರ ನೀ.ಬ.ಸ. ಸಂಘವು ತನ್ನ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸ್ಥಳಾವಕಾಶ ಇಲ್ಲದ ಕಾರಣ ನಿವೇಶನಕ್ಕಾಗಿ ಕೆ.ಎನ್.ಎನ್.ಎಲ್.ಗೆ ಮನವಿ ಪತ್ರ ಸಲ್ಲಿಸಿದರೆ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಹೊಸಪೇಟೆಯ ಅಮರಾವತಿ ನೀ.ಬ.ಸ. ಸಂಘವು ಹಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಮನವಿ ಸಲ್ಲಿಸಿದೆ.

7. ಬಿಚ್ಚಾಲಿ ನೀ.ಬ.ಸ.ಸಂ.ವು ನಿವೇಶನ ಪಡೆದು ಸ್ಥಳೀಯ ಶಾಸಕರಿಂದ ಭೂಮಿ ಪೂಜೆಯನ್ನೂ ನೆರವೇರಿಸಿದೆ. ಅಂದಾಜು ಪಟ್ಟಿ ತಯಾರಿಕೆ ಹಾಗೂ ಅನುಷ್ಠಾನ ಕಾರ್ಯವು ಮುಂದೆ ಆಗಬೇಕಿದೆ.

## ಯೋಜನಾ ವ್ಯಾಪ್ತಿಯಲ್ಲಿ ರಚನೆಯಾಗಿರುವ ನೀ.ಬ.ಸ. ಸಂಘಗಳ ಸ್ಥಿತಿ–ಗತಿ:

ಆಗಸ್ಟ್ 31, 2022ರವರೆಗೆ ವಿ.ಎನ್.ಸಿ ಯೋಜನಾ ವ್ಯಾಪ್ತಿಯಲ್ಲಿ ನೀ.ಬ.ಸ.ಸಂಘಗಳ ರಚನೆ ಮತ್ತು ನೋಂದಣಿ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿದ್ದು ಅದರ ಒಟ್ಟಾರೆ ಚಿತ್ರಣವನ್ನು ಈ ಕೋಷ್ಟಕದಲ್ಲಿ ನೀಡಲಾಗಿದೆ.

| ಸೂಚಕಗಳು | ಸಾಧನೆ | | | ಪ್ರಗತಿಯಲ್ಲಿರುವುದು |
|---|---|---|---|---|
| | ಬಲದಂಡೆ | ಎಡದಂಡೆ | ಒಟ್ಟು | |
| ಅಧಿಸೂಚನೆ ಆಗಿರುವುದು | 18 | 11 | 29 | 0 |
| ನೋಂದಣಿ ಆಗಿರುವುದು | 8 | 11 | 19 | 10 |
| ಸಂಘದ ಆಡಳಿತ ಮಂಡಳಿ ಸಕ್ರಿಯವಾಗಿರುವುದು | 8 | 10 | 18 | 11 |
| ಒಪ್ಪಂದ ಪತ್ರ ಆಗಿರುವುದು | 6 | 10 | 16 | 13 |
| ನೀರಿನ ದರ ಸಂಗ್ರಹ ಮಾಡುತ್ತಿರುವ ಸಂಘಗಳು | – | 3 | 3 | 26 |
| ಸಂಘದ ಕಚೇರಿಗೆ ಸೈಟ್ ಹೊಂದಿರುವ ಸಂಘಗಳು | 2 | 6 | 8 | 21 |

(ಒಟ್ಟು ನೀ.ಬ.ಸ.ಸಂ.ಗಳ ಸಂಖ್ಯೆ–29)

## ಸಂಘಗಳು ಸ್ವಂತ ಕಟ್ಟಡ ನಿರ್ಮಾಣಕ್ಕೆ ನಿವೇಶನ ಪಡೆದಿರುವ ಮಾಹಿತಿ (ಆಗಸ್ಟ್ 2022ರ ಅಂತ್ಯದ ವೇಳೆಗೆ)

| ಕ್ರ.ಸಂ. | ಸಂಘದ ಹೆಸರು | ನಿವೇಶನದ ಅಳತೆ | ಸ್ಥಿತಿ–ಗತಿ |
|---|---|---|---|
| 1. | ಬಿಚ್ಚಾಲಿ | 40x50 ಅಡಿ | ಈ ಎಲ್ಲಾ ಸಂಘಗಳಿಗೂ ಗ್ರಾಮ ಪಂಚಾಯ್ತಿಯಿಂದ ನಿವೇಶನ ದೊರೆತಿದೆ. |
| 2. | ಹೊಸಳ್ಳಿ | 16x75 ಅಡಿ | |
| 3. | ಚಿಕ್ಕಜಂತಕಲ್ | 24x30 ಅಡಿ | |
| 4. | ಸಂಗಾಪುರ | 39x36 ಅಡಿ | |
| 5. | ಬಂಡಿಹರ್ಲಾಪುರ | 70x70 ಅಡಿ | |
| 6. | ಹುಲಿಗಿ | 63x94 ಅಡಿ | |
| 7. | ಮಲಪನಗುಡಿ | 30x40 ಅಡಿ | |
| 8. | ದೇಶನೂರು | 30x40 ಅಡಿ | |

# ಇದೇ ಪ್ರಪ್ರಥಮ ಬಾರಿಗೆ ನಾವೂ ನೀರಿನ ದರ ಸಂಗ್ರಹ ಮಾಡಿದೆವು!

ನಮ್ಮ ನೀರು ಬಳಕೆದಾರರ ಸಹಕಾರ ಸಂಘವು ಆರಂಭವಾದ ನಂತರ ಇದೇ ಮೊದಲ ಬಾರಿಗೆ ನಮ್ಮ ಅಚ್ಚುಕಟ್ಟುದಾರ ರೈತರಿಂದ ನೀರಿನ ದರ ವಸೂಲಿ ಮಾಡಲಾಗಿದೆ. ಮುಂಗಾರು ಹಂಗಾಮಿನ ಬೆಳೆಗಳಿಗೆ ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸಿದ್ದು ನಮ್ಮ ಸಂಘಕ್ಕೆ ಹೆಮ್ಮೆಯ ವಿಷಯ. ಇದಕ್ಕೆ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಸುದರ್ಶನ ವರ್ಮ, ನಿರ್ದೇಶಕರು ಹಾಗೂ ಸದಸ್ಯರು ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದಾರೆ. ನಾವು ರೂ.22,400 ನೀರಿನ ದರವನ್ನು ನಿಗಮಕ್ಕೆ ಪಾವತಿಸಿದ್ದೇವೆ.

ಆದರೆ ಈ ದರ ಸಂಗ್ರಹಣೆ ಕೆಲಸವು ನಾನು ಅಂದುಕೊಂಡಷ್ಟು ಸುಲಭದ್ದಾಗಿರಲಿಲ್ಲ. ಮೊದಲು ರೈತರು ನೀರಿನ ದರ ಪಾವತಿಸಲು ಹಿಂದೇಟು ಹಾಕಿದರು. ನಿಮಗೆ ದರ ವಸೂಲಿಯ ಅಧಿಕಾರವಿದೆಯೇ ಎಂದು ಪ್ರಶ್ನಿಸಿದರು, 'ಗ್ರಾಮ ಲೆಕ್ಕಿಗರು ಬಂದು ಮತ್ತೆ ನೀರಿನ ದರ ಪಾವತಿಸಲು ಕೇಳಿದರೆ ಏನು ಮಾಡುವುದು' ಎಂಬ ಅನುಮಾನ ಅವರದಾಗಿತ್ತು. ಅವರಿಗೆ ನಾವು ನಮ್ಮ ಸಂಘದ ವತಿಯಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ನೀರಿನ ದರ ವಸೂಲಿ ಮಾಡಲು ನಡೆಸಿದ್ದ ಪತ್ರ ವ್ಯವಹಾರ, ನಿಗಮವು ಮತ್ತು ಸಂಘವು ಮಾಡಿಕೊಂಡಿರುವ ನೀರು ನಿರ್ವಹಣೆ ಹಸ್ತಾಂತರ ಒಪ್ಪಂದ ಪತ್ರ, ದರ ವಸೂಲಿ ಮಾಡಲು ನೀರಾವರಿ ಇಲಾಖೆಯಿಂದ ಬಂದಿದ್ದ ಸುತ್ತೋಲೆಗಳು ಹಾಗೂ ಆದೇಶ ಪತ್ರಗಳೆಲ್ಲವನ್ನೂ ತೋರಿಸಿದ ನಂತರ ರೈತರು ಸಮಾಧಾನಗೊಂಡರು.

ರೈತರು ನೀರಿನ ದರ ಪಾವತಿಸಿದ ಕೂಡಲೇ ಎಲ್ಲರಿಗೂ ಸ್ಥಳದಲ್ಲಿಯೇ ಅವರವರ ಸರ್ವೆ ನಂಬರ್ ಹಾಗೂ ಜಮೀನು ವಿವರ ನಮೂದಿಸಿ ರಶೀದಿ ನೀಡಲಾಗುತ್ತಿದೆ. ಇದು ಅವರಿಗೆ ಸಂಘದ ಬಗ್ಗೆ ನಂಬಿಕೆಯನ್ನು ಹೆಚ್ಚಿಸಿದೆ. ಗ್ರಾಮ ಲೆಕ್ಕಿಗರು ಒಂದು ವೇಳೆ ಪ್ರಶ್ನೆ ಮಾಡಿದರೆ ಇದೇ ರಶೀದಿಯನ್ನು ತೋರಿಸಿ ಎಂದು ರೈತರಿಗೆ ಮನವರಿಕೆ ಮಾಡಿದ್ದೇವೆ, ನಮ್ಮ ಊರಿನ ಗ್ರಾಮ ಲೆಕ್ಕಿಗರೂ ಸಹ



ಆರಂಭದಲ್ಲಿ ಅನುಮಾನ ವ್ಯಕ್ತಪಡಿಸಿ ನಮಗೆ ಪ್ರಶ್ನೆ ಮಾಡಿದ್ದರು. ಅವರಿಗೂ ಸಹ ಇಲಾಖೆಯ ಆದೇಶಗಳನ್ನು ತೋರಿಸಿ ತಿಳುವಳಿಕೆ ಮೂಡಿಸಲಾಗಿದೆ.

ನೀರಿನ ದರ ಪಾವತಿಸುವ ಬಗ್ಗೆ ದೂರವಾಣಿಯ ಮೂಲಕ ಮೊದಲೇ ನಾನು ಮತ್ತು ನಮ್ಮ ನಿರ್ದೇಶಕರುಗಳು ರೈತರಿಗೆ ತಿಳಿಸುತ್ತೇವೆ. ಜೊತೆಗೆ ನಮ್ಮ ಸಂಘದ ವಾರ್ಷಿಕ ಮಹಾ ಸಭೆಯಲ್ಲಿ ಈ ಬಗ್ಗೆ ಅಜೆಂಡಾ ಇಟ್ಟು ಚರ್ಚಿಸುತ್ತೇವೆ. ನಮ್ಮ ಸಂಘದ ನಿರ್ದೇಶಕರುಗಳೂ ಸಹ ಅವರವರ ಗ್ರಾಮದಲ್ಲಿ ಹಣವನ್ನು ಸಂಗ್ರಹಿಸಿದ್ದು ಬೇಗನೆ ನೀರಿನ ದರ ಸಂಗ್ರಹಿಸಲು ಸಾಧ್ಯವಾಗಿದೆ. ಕೆಲವು ರೈತರು ನನ್ನ ಮನೆಗೇ ಬಂದು ಹಣ ಪಾವತಿಸಿದ್ದಾರೆ.

ನನ್ನ ಕೆಲಸದ ಒತ್ತಡದಲ್ಲಿ ಎಲ್ಲಾ ಹಳ್ಳಿಗಳಿಗೂ ಹೋಗಿ ನೀರಿನ ದರ ಸಂಗ್ರಹಣೆ ಮಾಡುವುದು ಕಷ್ಟ ಹಾಗೂ ತಡವಾಗುತ್ತದೆ. ಅದಕ್ಕಾಗಿ ಒಂದೊಂದು ಗ್ರಾಮದಲ್ಲಿ ಒಬ್ಬೊಬ್ಬ ಸಂಪನ್ಮೂಲ ವ್ಯಕ್ತಿಯನ್ನು ತಾತ್ಕಾಲಿಕವಾಗಿ ನೇಮಿಸಿ ದರ ಸಂಗ್ರಹಿಸುವ ಆಲೋಚನೆ ಇದೆ. ಆದರೆ ಈ ಬಗ್ಗೆ ಸಂಘದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಿದೆ. ಇದು ಸಾಧ್ಯವಾಗದಿದ್ದರೆ ಪ್ರತಿ ಶನಿವಾರ ಮತ್ತು ಭಾನುವಾರ ಒಂದೊಂದು ಊರಿಗೆ ಹೋಗಿ ನಾನೇ ಸಂಗ್ರಹಣೆ ಮಾಡುವ ಆಲೋಚನೆ ಇದೆ.

ಕೆಲವು ರೈತರು ಈಗಲೂ ನೀರಿನ ದರ ಪಾವತಿಗೆ ಹಿಂದೇಟು ಹಾಕುತ್ತಿದ್ದಾರೆ. ಅವರ ಮಾನಸಿಕ ಸ್ಥಿತಿಯನ್ನು ಹೋಗಲಾಡಿಸಲು ಅಲ್ಲಲ್ಲಿ ಗ್ರಾಮಸಭೆ ಮಾಡಬೇಕು, ಮಾಹಿತಿಕೊಡಬೇಕು, ಡಂಗುರ ಹಾಕಿಸಬೇಕು ಹಾಗೂ ಕರಪತ್ರ ಮಾಡಿ ಎಲ್ಲರಿಗೂ ಹಂಚಬೇಕು ಎಂದುಕೊಂಡಿದ್ದೇವೆ.

ಇಲಾಖೆಯವರು ಹಾಗೂ ಯೋಜನಾ ಸಮಾಲೋಚಕ ತಂಡದವರು ನಮಗೆ ಕಾಲ-ಕಾಲಕ್ಕೆ ಮಾರ್ಗದರ್ಶನ ನೀಡಿದ್ದು ಈ ನೀರಿನ ದರ ಸಂಗ್ರಹಣೆ ಕೆಲಸವನ್ನು ಮಾಡಲು ಸಹಾಯವಾಯಿತು. ಮುಂದೆಯೂ ಸಹ ಹೀಗೆಯೇ ಮುಂದುವರಿಸುತ್ತೇವೆ.

• **ಶ್ರೀ ಸಿದ್ದಯ್ಯ ಹಿರೇಮಠ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯನಗರ ನೀ.ಬ.ಸ.ಸಂಘ, ಆನೆಗುಂದಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

# ಕಾಡಾ ಕಾಮಗಾರಿಗಳ ವಿವರ

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಮುಖ್ಯ ಕಾಲುವೆಗಳ ಆಧುನೀಕರಣದ ಜೊತೆಗೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿಗಳನ್ನು (ಕಾಡಾ) ಸಹ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಈ ಕಾಡಾ ಕಾಮಗಾರಿಗಳಲ್ಲಿ ಮುಖ್ಯವಾಗಿ ಹೊಲಗಾಲುವೆ (ಸ್ಥಳೀಯವಾಗಿ ರೈತರು ಮಡಿಕಾಲುವೆ/ ಸೀಳುಗಾಲುವೆ ಎನ್ನುತ್ತಾರೆ), ಮೇಲ್ಮೈ ಬಸಿಗಾಲುವೆ, ಗಾಡಿಸೇತುವೆ ಇತ್ಯಾದಿ ರಚನೆಗಳು ಬರುತ್ತವೆ. ಜೊತೆಗೆ ಪ್ರತಿಯೊಂದು ನೀರು ಬಳಕೆದಾರರ ಸಹಕಾರ ಸಂಘಕ್ಕೆ ಮತ್ತು ಒಕ್ಕೂಟಕ್ಕೆ ಸ್ವಂತ ಕಛೇರಿ ಕಟ್ಟಡ ನಿರ್ಮಿಸಿಕೊಳ್ಳುವ ಅವಕಾಶವೂ ಸಹ ಇದೆ.

ಪ್ರತಿಯೊಂದು ಮುಖ್ಯ ಕಾಲುವೆ ವ್ಯಾಪ್ತಿಯಲ್ಲಿ ಬರುವ ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಕಾಡಾ ಕಾಮಗಾರಿಗಳ ಅನುಷ್ಠಾನ ಕೈಗೊಳ್ಳಲಾಗುತ್ತದೆ. ಸ್ಥಳೀಯ ಸಮಸ್ಯೆಗಳ ಆಧಾರದಲ್ಲಿ, ಸಂಘಗಳ ಸದಸ್ಯರು ಹಾಗೂ ರೈತರೊಂದಿಗೆ ಸೇರಿ ವಿನ್ಯಾಸಗಳನ್ನು ತಯಾರಿಸಿ ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು.



## ಪ್ರಮುಖ ಕಾಡಾ ಕಾಮಗಾರಿಗಳು;

**ಹೊಲಗಾಲುವೆಗಳು:** ಮುಖ್ಯ ಕಾಲುವೆಯ ತೂಬಿನಿಂದ ರೈತರ ಜಮೀನಿಗೆ ನೀರು ಹಾಯಿಸುವುದು ಹೊಲಗಾಲುವೆಯ ಕೆಲಸವಾಗಿದ್ದು ಇದು ಸಾಮಾನ್ಯವಾಗಿ ಪ್ರತಿ ತೂಬಿಗೆ ಒಂದರಂತೆ ಇರುತ್ತದೆ. ಕೆಲವು ಕಡೆ ಎರಡು ಅಥವಾ ಮೂರು ಹೊಲಗಾಲುವೆಗಳು ಇರುವುದನ್ನು ಗಮನಿಸಲಾಗಿದೆ. ಹೊಲಗಾಲುವೆ ನಿರ್ಮಾಣ ಸಂದರ್ಭದಲ್ಲಿ ಇಳಿಜಾರಿಗೆ ಅನುಗುಣವಾಗಿ ಅಗತ್ಯ ಇರುವಲ್ಲಿ 'ಸ್ಲೋಪ್' (ಡ್ರಾಪ್) ಮಾಡಿಕೊಳ್ಳಲಾಗುವುದು. ಜೊತೆಗೆ ಅಗತ್ಯ ಇರುವೆಡೆ ಥೇಂಬರ್‌ಗಳನ್ನು ಸಹ ನಿರ್ಮಿಸಲಾಗುವುದು.

**ಮೇಲ್ಮೈ ಬಸಿಗಾಲುವೆ:** ಕಾಲುವೆಯ ಹೆಚ್ಚುವರಿ ನೀರನ್ನು ಹೊರ ಹಾಕಲು ಈ ಬಸಿಗಾಲುವೆಗಳು ಸಹಾಯ ಮಾಡುತ್ತದೆ. ಕಾಲುವೆಯಿಂದ ಬಂದ ಹೆಚ್ಚುವರಿ ನೀರನ್ನು ಈ ಬಸಿಗಾಲುವೆಯ ಮೂಲಕ ಮರಳಿ ನದಿಗೆ ಅಥವಾ ಹಳ್ಳಗಳಿಗೆ ಹರಿಸಲಾಗುತ್ತದೆ. ಕೆಲವು ಕಾಲುವೆಗಳಲ್ಲಿ ಬಸಿಗಾಲುವೆಗಳಿಂದಲೂ ಸಹ ನೀರನ್ನು ಬಳಸಿಕೊಂಡು ರೈತರು ಬೆಳೆ ಬೆಳೆಯುವುದನ್ನು ಕಾಣಬಹುದಾಗಿದೆ.

**ಸೇತುವೆಗಳು/ಪೈಪ್ ಕಲ್ವರ್ಟ್:** ಹೊಲಗಾಲುವೆಗಳನ್ನು ದಾಟಿಕೊಂಡು ರೈತರು ತಮ್ಮ ಜಮೀನಿಗೆ ಟ್ರಾಕ್ಟರ್ ಮತ್ತು ಎತ್ತಿನ ಬಂಡಿ ಹಾದು ಹೋಗಲು ನಿರ್ಮಿಸುವ ರಚನೆ ಇದಾಗಿರುತ್ತದೆ. ಇದು ಸಿಮೆಂಟ್ ಪೈಪುಗಳನ್ನು ಬಳಸಿ ಮಾಡುವಂತಹುದಾಗಿದ್ದು, ಸೇತುವೆಯ ಎರಡೂ ಕಡೆ ಗೋಡೆಯನ್ನು ಹೊಂದಿರುತ್ತದೆ. ಇವುಗಳ ಸಹಾಯದಿಂದ ರೈತರು ಜಮೀನಿನಿಂದ ತಮ್ಮ ಬೆಳೆಗಳನ್ನು ತರಲು ಹಾಗೂ ಜಮೀನಿಗೆ ಗೊಬ್ಬರ ಇತ್ಯಾದಿ ಸಾಗಿಸಲು ಉಪಯುಕ್ತವಾಗಿರುತ್ತದೆ.

**ಸಂಘದ ಕಟ್ಟಡ:** ಪ್ರತಿ ನಿ.ಬ.ಸ.ಸಂ.ಗಳಿಗೆ ತಮ್ಮ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು, ಸಭೆಗಳನ್ನು ನಡೆಸಲು ಹಾಗೂ ದಾಖಲಾತಿಗಳನ್ನು ಸಂರಕ್ಷಿಸಲು ಸ್ವಂತ ಕಛೇರಿ ಕಟ್ಟಡ ಅವಶ್ಯಕ. ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ ಪ್ರತಿಯೊಂದು ಸಂಘಗಳಿಗೂ ಕಟ್ಟಡ ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗಿದ್ದು, ಇದಕ್ಕೆ ಸಂಬಂಧಿಸಿದ ನಿವೇಶನವನ್ನು ಪಡೆದುಕೊಳ್ಳುವುದು ಸಂಘದ ಜವಾಬ್ದಾರಿಯಾಗಿರುತ್ತದೆ.

## ಕಾಡಾ ಕಾಮಗಾರಿಗಳ ಅವಶ್ಯಕತೆ;

ವಿಜಯನಗರ ಕಾಲುವೆಗಳ ವ್ಯಾಪ್ತಿಯ ಮುಖ್ಯ ಕಾಲುವೆಗಳಿಗೆ ಬಹುತೇಕ ಕಡೆ ಗೇಟುಗಳು ಇಲ್ಲದಿರುವುದರಿಂದ ನೀರು ನೇರವಾಗಿ ರೈತರ ಜಮೀನುಗಳಿಗೆ ನುಗ್ಗಿ ಬೆಳೆ ಹಾಳಾಗುತ್ತಿರುವ ನಿದರ್ಶನಗಳಿವೆ. ಹೊಲಗಾಲುವೆ ಮತ್ತು ಮೇಲ್ಮೈ ಬಸಿಗಾಲುವೆಗಳು ಅಭಿವೃದ್ಧಿ ಆಗದೇ ಇರುವುದರಿಂದ ಕಾಲುವೆಗಳು ಕೊರೆದು ಅಗಲವಾಗಿ ನೀರು ಪೋಲಾಗುತ್ತಿದೆ, ಕಾಲುವೆ ಕೊನೆ ಭಾಗದ ರೈತರಿಗೆ ಸಮಯಕ್ಕೆ ಸರಿಯಾಗಿ, ಸೂಕ್ತ ಪ್ರಮಾಣದ ನೀರು ತಲುಪದೇ ಬೆಳೆಯ ಇಳುವರಿ ಕುಂಠಿತವಾಗುತ್ತಿದೆ. ಅಲ್ಲದೆ ಕಾಲುವೆ ನೀರಿಗಾಗಿ ಕೆಲವೊಮ್ಮೆ ರೈತರ ನಡುವೆ ಜಗಳಗಳಾಗುತ್ತಿದೆ. ಸಂಘಗಳು ನೀರಿನ ದರ ವಸೂಲಿ ಮಾಡಲೂ ಸಹ ಇದರಿಂದ ಅಡಚಣೆಯಾಗಿದೆ. ಅಲ್ಲದೆ ಸಂಘಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ದಾಖಲೆಗಳ ಸಮರ್ಪಕ ನಿರ್ವಹಣೆ ಸಾಧ್ಯವಾಗುತ್ತಿಲ್ಲ ಮತ್ತು ಸಭೆಗಳನ್ನು ನಡೆಸಲು ಸೂಕ್ತ ಸ್ಥಳಾವಕಾಶವಿಲ್ಲದಂತಾಗಿದೆ.

ಈ ಎಲ್ಲಾ ಕಾರಣಗಳಿಂದ ಕಾಡಾ ಕಾಮಗಾರಿಗಳ ಅಗತ್ಯತೆ ತುಂಬಾ ಇದೆ ಎನ್ನಬಹುದು.

ಪ್ರಸ್ತುತ ಎಡಿಬಿ ನೆರವಿನ ವಿ.ಎನ್.ಸಿ ಯೋಜನೆಯಲ್ಲಿ ಕಾಡಾ ಕಾಮಗಾರಿಗಳ ಅನುಷ್ಠಾನಕ್ಕೆ ಅವಕಾಶ ಲಭ್ಯವಾಗಿದೆ. ಆದುದರಿಂದ ಸಂಘಗಳು ಮತ್ತು ಸಮುದಾಯ ಇದರ ಸದುಪಯೋಗಪಡಿಸಿಕೊಂಡು ನೀರಾವರಿ ಆಸ್ತಿಗಳನ್ನು ನಿರ್ಮಿಸಿಕೊಳ್ಳಬೇಕು ಹಾಗೂ ತಮ್ಮ ಅಚ್ಚುಕಟ್ಟು ಪ್ರದೇಶದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಯೋಜನೆಯ ಆಶಯವಾಗಿದೆ.

**ಸಂಗಾಪುರ ಸಂಘಕ್ಕೆ ಪ್ರಾಯೋಗಿಕ ಯತ್ನ:** ವಿ.ಎನ್.ಸಿ ಯೋಜನೆಯಲ್ಲಿ ಪ್ರಾಯೋಗಿಕವಾಗಿ ಸಂಗಾಪುರ ನೀರು ಬಳಕೆದಾರರ ಸಹಕಾರ ಸಂಘಕ್ಕೆ ಕಾಡಾ ಕಾಮಗಾರಿಗಳ ದಾಖಲಾತಿಗಳನ್ನು–ಅಂದರೆ ಸಂಘದ ನೋಂದಣಿ ಪತ್ರ, ಒಪ್ಪಿಗೆ ಪತ್ರ, ಒಪ್ಪಂದ ಪತ್ರದ ಪ್ರತಿ (ಎಂ.ಓ.ಯು), ನಿರ್ದಿಷ್ಟ ವಿನ್ಯಾಸಗಳು, ನಕ್ಷೆಗಳು ಮತ್ತು ಕಟ್ಟಡ ಕಾಮಗಾರಿ ಸೈಟ್



ಪ್ಲಾನ್, ಅನುಷ್ಠಾನದ ಕಾಲಾವಧಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಈ ದಾಖಲಾತಿಗಳನ್ನು 05.08.2022ರಂದು ಎಡಿಬಿ ಮತ್ತು ಯೋಜನಾ ಅನುಷ್ಠಾನ ಕಛೇರಿ (ಪಿ.ಐ.ಓ) ಅನುಮೋದನೆಗಾಗಿ ಸಲ್ಲಿಸಲಾಯಿತು.

ಎಡದಂಡೆ ವ್ಯಾಪ್ತಿಗೆ ಬರುವ ಆನೆಗುಂದಿ ಕಾಲುವೆಗೆ ಸೇರಿದ ಸಂಗಾಪುರ ನೀರು ಬಳಕೆದಾರರ ಸಹಕಾರ ಸಂಘದ ಕಾರ್ಯಕಾರಿ ಮಂಡಳಿಯು ಸಕ್ರಿಯವಾಗಿದ್ದು ಕಾಡಾ ಕಾಮಗಾರಿ (ಕ್ಯಾಡ್ ಪ್ಯಾಕೇಜ್) ದಾಖಲೆಗಳನ್ನು ತಯಾರಿಸಲು ಸೂಕ್ತ ಸಹಕಾರದ ಭರವಸೆ ಸಿಕ್ಕಿತು. ಆರಂಭಿಕ ಪ್ರಯತ್ನವಾಗಿ ಕೆ.ಎನ್.ಎನ್.ಎಲ್ ಇಂಜಿನಿಯರುಗಳು, ಯೋಜನಾ ಸಹಾಯಕ ಸಮಾಲೋಚಕ ತಂಡದ ತಜ್ಞರು, ಸಂಘದ ಪದಾಧಿಕಾರಿಗಳು, ನೀರಗಂಟಿ ಹಾಗೂ ತೂಬಿಗೆ ಸಂಬಂಧಪಟ್ಟ ರೈತರೊಂದಿಗೆ ಅಚ್ಚುಕಟ್ಟು ಪ್ರದೇಶದಲ್ಲಿಯೇ ಸಭೆ ನಡೆಸಲಾಯಿತು. ಸಂಗಾಪುರ ನೀ.ಬ.ಸ.ಸಂಘದ ನಕ್ಷೆಯನ್ನು ಪರಿಶೀಲಿಸಿದ ನಂತರ ಮಡಿಗಾಲುವೆಯ ಅಳತೆಯನ್ನು ಮಾಡಲಾಯಿತು.



ರೈತರಿಗೆ ಸಹಾಯವಾಗುವಂತೆ ಅವರು ಒಮ್ಮತದಿಂದ ಗುರುತಿಸಿದ ಜಾಗದಲ್ಲಿಯೇ ಗಾಡಿ ಸೇತುವೆಯನ್ನು ನಿರ್ಮಿಸಲು ಅಳತೆಯನ್ನು ತೆಗೆದುಕೊಳ್ಳಲಾಯಿತು. ನಂತರ ಕಾಲುವೆಗೆ ಸಂಬಂಧಪಟ್ಟ ಕೆ.ಎನ್.ಎನ್. ಎಲ್ ಇಂಜಿನಿಯರುಗಳೊಂದಿಗೆ ಚರ್ಚಿಸಿ ಕ್ಯಾಡ್ ಪ್ಯಾಕೇಜ್‌ಗಳಾದ ಹೊಲಗಾಲುವೆಗಳು, ಗಾಡಿ ಸೇತುವೆಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಯಿತು. ಒಮ್ಮೆ ಅಂದಾಜು ಪಟ್ಟಿ ತಯಾರಾದ ನಂತರ ಸಂಗಾಪುರ ನೀ.ಬ.ಸ. ಸಂಘಕ್ಕೆ ಹೋಗಿ ಸಂಘದ ಪದಾಧಿಕಾರಿಗಳೊಂದಿಗೆ ಈ ಅಂದಾಜು ಪಟ್ಟಿಯ ವಿವರಗಳನ್ನು ಚರ್ಚಿಸಲಾಯಿತು.

ಇದೇ ರೀತಿಯಲ್ಲಿ ಸಂಗಾಪುರ ನೀ.ಬ.ಸ.ಸಂಘವು ತನ್ನ ಸ್ವಂತ ಕಛೇರಿ ಕಟ್ಟಡ ನಿರ್ಮಿಸಿಕೊಳ್ಳಲು ಗ್ರಾಮ



ಪಂಚಾಯಿತಿಯಿಂದ ನಿವೇಶನವನ್ನು ಪಡೆದುಕೊಂಡಿದೆ. ಈ ನಿವೇಶನವನ್ನು ಅಧಿಕಾರಿಗಳೊಂದಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಲಾಯಿತು. ನಂತರ ಕಛೇರಿ ಕಟ್ಟಡದ ಅಂದಾಜು ಪಟ್ಟಿಯನ್ನು ಸೂಕ್ತ ವಿನ್ಯಾಸಗಳೊಂದಿಗೆ ತಯಾರಿಸಿ ನೀ.ಬ.ಸ ಸಂಘದೊಂದಿಗೆ ಚರ್ಚಿಸಿ ಒಪ್ಪಿಗೆ ಪಡೆಯಲಾಯಿತು.

ಈ ರೀತಿ ಹೊಲಗಾಲುವೆ, ಗಾಡಿ ಸೇತುವೆ ಹಾಗೂ ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿಗಳು, ಕರಡು ಒಪ್ಪಂದ ಪತ್ರ, ಇತ್ಯಾದಿ ದಾಖಲೆಗಳನ್ನು ಯೋಜನಾ ಅನುಷ್ಠಾನ ಕಛೇರಿ (ಕೆ.ಎನ್.ಎನ್.ಎಲ್) ಹಾಗೂ ಯೋಜನಾ ಸಹಾಯಕ ಸಮಾಲೋಚಕ ತಂಡವು ಯೋಜನಾ ನಿರ್ವಹಣಾ ಘಟಕ, ಇವರ ಮೂಲಕ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ವಿಜಯನಗರ ಕಾಲುವೆ ಆಧುನೀಕರಣ ಕಾಮಗಾರಿಗಳಲ್ಲಿ ಪರಿಸರ ಹಾಗೂ ಸಾಮಾಜಿಕ ಸುರಕ್ಷಾ ವಿಧಾನಗಳ ಅಳವಡಿಕೆ ಮುಖ್ಯವಾದುದು. ಈ ನಿಟ್ಟಿನಲ್ಲಿ ಜುಲೈ–ಆಗಸ್ಟ್ ತಿಂಗಳಲ್ಲಿ ಯೋಜನಾ ಸಹಾಯಕ ಸಮಾಲೋಚಕ ತಂಡದ ಪರಿಣಿತರು ವಿವಿಧ ಕಾಲುವೆಗಳು ಹಾಗೂ ಗುತ್ತಿಗೆದಾರರ ಕ್ಯಾಂಪ್‌ಗಳಿಗೆ ಭೇಟಿ ನೀಡಿ ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ, ಪರಿಸರ ಸುರಕ್ಷಾ ವಿಧಾನಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಿಯಾ ವರದಿಯನ್ನು (Corrective Action Report of Environmental Safeguards) ಸಿದ್ಧಪಡಿಸಿದೆ.**

# ಸಂಘಗಳಿಗೆ ಯೋಜನೆಯಲ್ಲಿ ಲಭ್ಯವಿರುವ ಅವಕಾಶಗಳು

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಡಿ ಕೈಗೊಳ್ಳಬಹುದಾದ ಕಾಡಾ ಕಾಮಗಾರಿಗಳ ವಿವರ, ಅವುಗಳ ಅನುಷ್ಠಾನದ ಮಹತ್ವ ಹಾಗೂ ಸಂಗಾಪುರ ನೀರು ಬಳಕೆದಾರರ ಸಹಕಾರಸಂಘಕ್ಕೆ ತಯಾರಿಸಿದ ಅಂದಾಜು ಪಟ್ಟಿಗಳ ಪ್ರಕ್ರಿಯೆ ಬಗ್ಗೆ ಹಿಂದಿನ ಪುಟದ ಲೇಖನದಲ್ಲಿ ತಿಳಿಯಲಾಗಿದೆ. ಪ್ರಸ್ತುತ ಲೇಖನವು ನೀ.ಬ.ಸ.ಸಂ.ಗಳು ಕಾಡಾ ಕಾಮಗಾರಿ ಕೈಗೊಳ್ಳಲು ಯಾವೆಲ್ಲಾ ಮಾನದಂಡಗಳನ್ನು ಹೊಂದಿರಬೇಕು ಎಂಬ ಬಗ್ಗೆ ವಿವರಿಸಲಾಗಿದೆ.

- ಸಂಘದ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಹೊಲಗಾಲುವೆಗಳ ಹಾಗೂ ಸಂಬಂಧಿತ ರಚನೆಗಳ ಕಾಮಗಾರಿ ಕೈಗೊಳ್ಳುವುದು;
- ಸಂಘವು ಸ್ವಂತ ಕಛೇರಿ ಕಟ್ಟಡ ನಿರ್ಮಾಣ ಮಾಡಿಕೊಳ್ಳುವುದು;
- ಸಂಘಕ್ಕೆ ಪೀಠೋಪಕರಣಗಳನ್ನು ಪಡೆದುಕೊಳ್ಳುವುದು;
- ಕಾಲುವೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಲಕರಣೆಗಳನ್ನು (ಓ ಅಂಡ್ ಎಂ ಕಿಟ್) ಪಡೆದುಕೊಳ್ಳುವುದು.

ಮೇಲೆ ತಿಳಿಸಿದ ಅವಕಾಶಗಳನ್ನು ಉಪಯೋಗಿಸಿಕೊಂಡು ಕಾಡಾ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ನೀ.ಬ.ಸ.ಸಂ.ಗಳು ಕೆಳಕಂಡ ಮಾನದಂಡಗಳನ್ನು ಹೊಂದಿರಬೇಕಾಗಿರುತ್ತದೆ;

1. ಸಂಘದ ನೋಂದಣಿ ಪ್ರಮಾಣ ಪತ್ರ ಹೊಂದಿರಬೇಕು
2. ಬ್ಯಾಂಕ್ ಖಾತೆ ಹೊಂದಿರಬೇಕು
3. ಸಂಘದ ಚುನಾವಣೆ ನಡೆದು ಕಾರ್ಯಕಾರಿ ಸಮಿತಿ ಸಕ್ರಿಯವಾಗಿರಬೇಕು
4. ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕನಿಷ್ಟ 3 (ಮೂವರು) ಮಹಿಳೆಯರು ಇರತಕ್ಕದ್ದು
5. ಸಂಘದ ವ್ಯಾಪ್ತಿಯ ಒಟ್ಟು ರೈತರಲ್ಲಿ ಕನಿಷ್ಟ ಶೇ.60ರಷ್ಟು ರೈತರು ಸಂಘದಲ್ಲಿ ಸದಸ್ಯತ್ವ ಹೊಂದಿರಬೇಕು ಅಥವಾ ಸಂಘದ ಒಟ್ಟು ಅಚ್ಚುಕಟ್ಟು ಪ್ರದೇಶದ ಶೇ.51ರಷ್ಟು ವ್ಯಾಪ್ತಿಯ ರೈತರು ಸದಸ್ಯತ್ವ ಪಡೆದುಕೊಂಡಿರಬೇಕು;
5. ಸಂಘಗಳು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಕಾರ್ಯದರ್ಶಿ) ಯನ್ನು ನೇಮಕ ಮಾಡಿಕೊಂಡಿರಬೇಕು;
6. ಇತ್ತೀಚಿನ ಲೆಕ್ಕ ಪರಿಶೋಧನಾ ವರದಿ ಹೊಂದಿರಬೇಕು; ವಾರ್ಷಿಕ ಮಹಾಸಭೆ ನಡೆಸಿದ ವರದಿಯನ್ನು ಹೊಂದಿರಬೇಕು;
7. ಎಲ್ಲಾ ದಾಖಲಾತಿಗಳ ಸಮರ್ಪಕ ನಿರ್ವಹಣೆ ಮಾಡುತ್ತಿರಬೇಕು;
8. ಕರ್ನಾಟಕ ನೀರಾವರಿ ನಿಗಮ, ಮುನಿರಾಬಾದ್, ಇವರೊಂದಿಗೆ ಒಪ್ಪಂದ ಪತ್ರ (ಎಂ.ಓ.ಯು) ಮಾಡಿಕೊಂಡಿರಬೇಕು;
9. ಪಾನ್‌ಕಾರ್ಡ್, ಟಾನ್‌ಕಾರ್ಡ್ ಮತ್ತು ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು;
10. ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಸಂಘದ ಹೆಸರಿನಲ್ಲಿ ನಿವೇಶನ ಹೊಂದಿರಬೇಕು ಮತ್ತು ಅದಕ್ಕೆ ಸೂಕ್ತ ದಾಖಲೆ ಒದಗಿಸಬೇಕು. ಗ್ರಾಮ ಪಂಚಾಯ್ತಿಯ ನಿವೇಶನವಾದರೆ ದಾಖಲೆ ಪತ್ರ ಅಥವಾ ದಾನಿಗಳಿಂದ ನಿವೇಶನ ಪಡೆದರೆ ಸಂಘದ ಹೆಸರಿಗೆ ನೋಂದಣಿ ಪತ್ರ ಇರಬೇಕು;
11. ಕಾಮಗಾರಿ ಅನುಷ್ಠಾನಗೊಳಿಸಲು ಸಂಘದ ಸಿದ್ಧತೆ ಬಗ್ಗೆ ವರದಿ ಸಲ್ಲಿಸುವುದು;
12. ಅಚ್ಚುಕಟ್ಟುದಾರ ರೈತರಿಂದ ನೀರಿನ ದರವನ್ನು ವಸೂಲು ಮಾಡಲು ಸಿದ್ಧತೆ ನಡೆಸಿರಬೇಕು;
13. ಮಹಿಳಾ ಉಪಸಮಿತಿಗಳಿಗೆ ಸಂಘದ ಉಪಸಮಿತಿಯ ಸ್ಥಾನವನ್ನು ನೀಡಬೇಕು;

14. ಸುಸ್ಥಿರ ಕೃಷಿ ಮತ್ತು ಜೀವನೋಪಾಯ ಚಟುವಟಿಕೆಗಳು, ತರಬೇತಿ ಮತ್ತು ಅಧ್ಯಯನ ಪ್ರವಾಸಗಳಲ್ಲಿ ಭಾಗವಹಿಸಬೇಕು.

ಯೋಜನಾ ಸಹಾಯಕ ಸಮಾಲೋಚಕ ತಂಡವು ಎಲ್ಲಾ ಸಂಘಗಳಿಗೆ ಭೇಟಿ ನೀಡಿ ಮೇಲಿನ ಅಂಶಗಳ ಬಗ್ಗೆ ಸಂಘಗಳ ಸ್ಥಿತಿ–ಗತಿಯನ್ನು ಅಧ್ಯಯನ ಮಾಡಿ ಮಾರ್ಗದರ್ಶನ ಮಾಡುತ್ತಿದೆ. ಈಗಾಗಲೇ ಕಾಡಾ ಕಾಮಗಾರಿಗಳ ಪ್ರಾಯೋಗಿಕ ದಾಖಲಾತಿಗಳನ್ನು ಸಂಗಾಪುರ ನೀ.ಬ.ಸ.ಸಂಘಕ್ಕೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದ್ದು ಒಪ್ಪಿಗೆ ದೊರೆತ ಬಳಿಕ ಉಳಿದ ಸಂಘಗಳಲ್ಲಿ ಇದೇ ಪ್ರಕ್ರಿಯೆಯನ್ನು ಅನುಸರಿಸಲಾಗುವುದು. ಈಗಾಗಲೇ ಹಲವು ಸಂಘಗಳು ಮಡಿಕಾಲುವೆಗಳ ಸಮೀಕ್ಷೆ, ಕಟ್ಟಡ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸುವುದು ಮುಂತಾದ ಹಲವು ಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತವಾಗಿದ್ದು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರ.ಸಂ. | ಚಟುವಟಿಕೆ | ನೀ.ಬ.ಸ.ಸಂ.ಗಳ ಹೆಸರು |
|---|---|---|
| 1. | ಪ್ರಾಯೋಗಿಕವಾಗಿ ದಾಖಲಾತಿಗಳನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಿರುವುದು (2 ಪ್ಯಾಕೇಜ್‌ಗೆ–ಮಡಿಕಾಲುವೆ ಮತ್ತು ಕಛೇರಿ ಕಟ್ಟಡ) | ಸಂಗಾಪುರ |
| 2. | ಮಡಿಕಾಲುವೆ ಸರ್ವೆ ಕಾರ್ಯ ಪ್ರಗತಿಯಲ್ಲಿರುವುದು | ಸಂಗಾಪುರ, ಆನೆಗುಂದಿ, ಬಿಚ್ಚಾಲಿ, ಹುಲಿಗಿ |
| 3. | ಕಛೇರಿ ಕಟ್ಟಡ ನಿರ್ಮಾಣಕ್ಕೆ ನಿವೇಶನ ಪಡೆದಿರುವುದು | ಸಂಗಾಪುರ, ಬಿಚ್ಚಾಲಿ, ಹುಲಿಗಿ, ಹೊಸಳ್ಳಿ, ಚಿಕ್ಕಜಂತಕಲ್, ಬಂಡಿಹರ್ಲಾಪುರ, ದೇಶನೂರು, ಮಲಪನಗುಡಿ |
| 4. | ಕಟ್ಟಡ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸುತ್ತಿರುವುದು | ಸಂಗಾಪುರ, ಬಿಚ್ಚಾಲಿ, ಹುಲಿಗಿ, ಹೊಸಳ್ಳಿ, ಚಿಕ್ಕಜಂತಕಲ್ |
| 5. | ನಿಗಮದೊಂದಿಗೆ ಒಪ್ಪಂದ ಪತ್ರ ಮಾಡಿಕೊಂಡಿರುವುದು | ಸಂಗಾಪುರ, ಬಿಚ್ಚಾಲಿ, ಹುಲಿಗಿ, ಶಿವಪುರ, ಬಂಡಿಹರ್ಲಾಪುರ, ಆನೆಗುಂದಿ, ಚಿಕ್ಕಜಂತಕಲ್, ಹಿರೇಜಂತಕಲ್, ಹೊಸಳ್ಳಿ, ಡಾಣಾಪುರ 2, ರಾಮಸಾಗರ, ಸಿರುಗುಪ್ಪ, ಅಮರಾವತಿ, ನಂ.10 ಮುದ್ದಾಪುರ, ಬೆಳಗೋಡಹಾಳ್, ಕಾಳಘಟ್ಟ, ಮಲಪನಗುಡಿ, ದೇಶನೂರು |

ಬಾಕಿ ಉಳಿದ ಎಲ್ಲಾ ಸಂಘಗಳು ಇದೇ ರೀತಿ ಕ್ರಿಯಾಶೀಲವಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.



ಆನೆಗುಂದಿ ಅಣೆಕಟ್ಟು

# ಸಂಘಗಳಿಗೆ ದಾಖಲೆಗಳು ಮತ್ತು ಲೆಕ್ಕಪತ್ರಗಳ ಪ್ರಾಮುಖ್ಯತೆ

ಸರಿಯಾದ ಲೆಕ್ಕಪತ್ರ ಮತ್ತು ದಾಖಲೆಗಳ ನಿರ್ವಹಣೆ ಪ್ರಕ್ರಿಯೆಯು ನೀರು ಬಳಕೆದಾರರ ಸಹಕಾರ ಸಂಘಗಳ ಕಾರ್ಯಕ್ಷಮತೆಯನ್ನು ವೃದ್ಧಿಸುತ್ತದೆ. ಅಲ್ಲದೆ ಇದು ಸಂಘಗಳ ಸುಸ್ಥಿರತೆಗಾಗಿ ಆದಾಯ ಹೆಚ್ಚಳದ ಗುರಿ ಸಾಧಿಸಲು ಅವಕಾಶಗಳನ್ನು ಒದಗಿಸುತ್ತದೆ.

**ಪ್ರಾಮುಖ್ಯತೆ:** ದಾಖಲಾತಿ ನಿರ್ವಹಣೆಯ ಒಂದು ಪ್ರಮುಖ ಅಂಶವೆಂದರೆ ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು. ನೀ.ಬ.ಸ.ಸಂಘಗಳು ತಮ್ಮ ವ್ಯವಹಾರದ ಎಲ್ಲಾ ಹಣಕಾಸಿನ ದಾಖಲೆಗಳನ್ನು ದಕ್ಷತೆಯಿಂದ ನಿರ್ವಹಿಸಿದಾಗ ಅವುಗಳ ಆರ್ಥಿಕ ಸ್ಥಿತಿ, ಆದಾಯ ಮತ್ತು ವೆಚ್ಚದ ಸ್ಥಿತಿ-ಗತಿಯನ್ನು ತೋರಿಸುತ್ತದೆ. ಅಲ್ಲದೆ ವ್ಯವಸ್ಥಿತ ದಾಖಲಾತಿಗಳು ಲಭ್ಯವಿದ್ದರೆ ಆದಾಯ ಮತ್ತು ವೆಚ್ಚದ ಮಾಹಿತಿಯನ್ನು ತಕ್ಷಣವೇ ಪಡೆಯಬಹುದು, ಯಾರಿಗೆ ಬೇಕಾದರೂ ತೋರಿಸಬಹುದು ಮತ್ತು ಮಾಹಿತಿ ಹಂಚಿಕೊಳ್ಳಬಹುದು.

**ಕಾಯ್ದೆ-ಕಾನೂನು ದಾಖಲೆಗಳ ಅವಶ್ಯಕತೆ:** ನೀ.ಬ.ಸ.ಸಂಘಗಳ ಕಛೇರಿಯಲ್ಲಿ ಸಂಘದ ಬೈಲಾ ಪ್ರತಿ, ಸಹಕಾರಿ ಕಾಯ್ದೆ ಮತ್ತು ನೀರಾವರಿ ಕಾಯ್ದೆಗಳ ಇತ್ತೀಚಿನ ಮಾರ್ಪಾಡುಗಳ ವರದಿಗಳು, ಸಂಘದ ದತ್ತಾಂಶಗಳಾದ ಸರ್ವೆ ನಂಬರ್‌ವಾರು ಅಚ್ಚುಕಟ್ಟುದಾರರ ಪಟ್ಟಿ, ನಕ್ಷೆಗಳು, ಮಣ್ಣಿನ ಪರೀಕ್ಷೆ ವರದಿ ಇತ್ಯಾದಿಗಳನ್ನು ಹೊಂದಿರಬೇಕಾಗುತ್ತದೆ.

**ಸ್ವತ್ತು ದಾಖಲಾತಿಗಳ ನಿರ್ವಹಣೆ:** ಸಂಘಗಳು ತಮ್ಮ ವ್ಯಾಪ್ತಿಯ ಆಸ್ತಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಆಸ್ತಿ ರಿಜಿಸ್ಟರ್ ರೂಪದಲ್ಲಿ ದಾಖಲಿಸಿ, ತಾನು ಹೊಂದಿರುವ ಸ್ವತ್ತುಗಳ ಬಗ್ಗೆ ನಿಗಾ ಇಡುವುದು ಅವಶ್ಯಕ. ಇದರಿಂದ ಸಂಘದ ಸ್ವತ್ತುಗಳು ಯಾವುವು, ಅವು ಯಾವ ಸ್ಥಿತಿಯಲ್ಲಿವೆ ಮತ್ತು ಅವುಗಳಿಗೆ ಸಂಬಂಧಿಸಿದ ಯಾವುದೇ ವೆಚ್ಚಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲು ಅನುಕೂಲವಾಗುತ್ತದೆ. ಅಲ್ಲದೆ ಸ್ಥಿರ ಆಸ್ತಿ ರಿಜಿಸ್ಟರುಗಳ ಉದ್ದೇಶವೆಂದರೆ ಸ್ವತ್ತುಗಳ ಮೌಲ್ಯವನ್ನು ಟ್ರ್ಯಾಕ್ ಮಾಡಲು, ತೆರಿಗೆ ಲೆಕ್ಕ ಹಾಕಲು ಮತ್ತು ಸವಕಳಿ ವೆಚ್ಚವನ್ನು ನಿರ್ಧರಿಸಲು ಉಪಯೋಗವಾಗುತ್ತದೆ.

ಮೇಲೆ ತಿಳಿಸಿದ ಪ್ರಮುಖ ದಾಖಲೆಗಳ ಜೊತೆಗೆ ಸಂಘಗಳಲ್ಲಿ ನಿರ್ವಹಿಸಬೇಕಾದ ಇನ್ನಿತರೆ ದಾಖಲಾತಿಗಳ ಪಟ್ಟಿಯನ್ನು ಕೆಳಕಂಡ ಕೋಷ್ಟಕದಲ್ಲಿ ನೋಡಬಹುದು;

**ನೀರು ಬಳಕೆದಾರರ ಸಹಕಾರ ಸಂಘಗಳು ನಿರ್ವಹಿಸಬೇಕಾದ ಪುಸ್ತಕ/ರಿಜಿಸ್ಟರ್‌ಗಳು/ದಾಖಲೆಗಳು**

| ಕ್ರ.ಸಂ | ದಾಖಲೆಗಳು |
|---|---|
| 1 | ಆಡಳಿತ ಮಂಡಳಿ ನಿರ್ಣಯ (ಠರಾವು) ಪುಸ್ತಕ |
| 2 | ವಾರ್ಷಿಕ ಮಹಾಸಭೆ ಪುಸ್ತಕ |
| 3 | ಸಭೆಯ ಸೂಚನಾ ಪುಸ್ತಕ |
| 4 | ಆಡಿಟ್ ಹಾಗೂ ಅನುಪಾಲನಾ ವರದಿ ರಿಜಿಸ್ಟರ್‌ಗಳು |
| 5 | ದಾಸ್ತಾನು ರಿಜಿಸ್ಟರ್ |
| 6 | ಜಮಾ-ಖರ್ಚು ರಿಜಿಸ್ಟರ್ |
| 7 | ಸ್ವೀಕೃತಿ ಮತ್ತು ಪಾವತಿಗಳ ಓಚರ್ ಪುಸ್ತಕ |
| 8 | ಖರೀದಿ ಪುಸ್ತಕ |
| 9 | ನಿರ್ವಹಣಾ ವೆಚ್ಚ/ ರಿಪೇರಿ ರಿಜಿಸ್ಟರ್ |
| 10 | ಠೇವಣಿಗಳ ರಿಜಿಸ್ಟರ್ |
| 11 | ಭೂ ದಾಖಲೆಗಳ ರಿಜಿಸ್ಟರ್ |
| 12 | ಗೋದಾಮಿನ ರಿಜಿಸ್ಟರ್ |
| 13 | ಕಟ್ಟಡಗಳ ದಾಖಲಾತಿ/ ನಕ್ಷೆಗಳು |
| 14 | ಸಿಬ್ಬಂದಿ ಹಾಜರಾತಿ ಸಹಿ/ವೇತನ ಪಾವತಿ ರಿಜಿಸ್ಟರ್ |
| 15 | ಸೇವಾ/ಸರ್ವಿಸ್ ರಿಜಿಸ್ಟರ್ |
| 16 | ಷೇರುಖಾತೆ ರಿಜಿಸ್ಟರ್/ಖಾತೆದಾರರ ಪಟ್ಟಿ |
| 17 | ಸ್ಟ್ಯಾಂಪ್ ರಿಜಿಸ್ಟರ್ |
| 18 | ನಗದು ಪುಸ್ತಕ |
| 19 | ಜನರಲ್ ಲೆಡ್ಜರ್ |
| 20 | ಸದಸ್ಯರ ನೀರಿನ ದರ ವಸೂಲಾತಿ/ಬಾಕಿ ರಿಜಿಸ್ಟರ್ |
| 21 | ಬ್ಯಾಂಕ್‌ಖಾತೆ ಪುಸ್ತಕ |
| 22 | ನೀರು ಹಂಚಿಕೆ ರಿಜಿಸ್ಟರ್ ಮತ್ತು ನೀರು ಕಂದಾಯ ದಾಖಲೆ |
| 23 | ಪಾನ್, ಟಾನ್, ಜಿ.ಎಸ್.ಟಿ. ದಾಖಲೆಗಳ ನಿರ್ವಹಣೆ |

# ಸಹಭಾಗಿತ್ವ ನೀರಾವರಿ ನಿರ್ವಹಣೆ ಹಾಗೂ ಕಾಡಾ ಕಾಮಗಾರಿಗಳ ಕಾರ್ಯಾಗಾರ

ದಿನಾಂಕ 29.7.2022 ರಂದು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ವಡ್ಡರಹಟ್ಟಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇಲ್ಲಿ ಸಹಭಾಗಿತ್ವ ನೀರಾವರಿ ನಿರ್ವಹಣೆ ಮತ್ತು ಕಾಡಾ ಕಾಮಗಾರಿಗಳ ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದ ಉದ್ದೇಶಗಳ ಬಗ್ಗೆ ವಿವರಿಸುತ್ತಾ, ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ ಸಹಭಾಗಿತ್ವದ ನೀರಾವರಿ ನಿರ್ವಹಣೆ, ರೈತರ ಪಾಲ್ಗೊಳ್ಳುವಿಕೆಯ ಮಹತ್ವ, ನೀ.ಬ.ಸ.ಸಂ.ಗಳ ಪ್ರಸ್ತುತ ಸ್ಥಿತಿ–ಗತಿ, ಸಂಘಗಳ ವತಿಯಿಂದ ಕೈಗೊಳ್ಳಬಹುದಾದ ಅಚ್ಚುಕಟ್ಟು ಪ್ರದೇಶದ ಆಧುನೀಕರಣ ಕಾಮಗಾರಿಗಳ ಅವಶ್ಯಕತೆ ಇತ್ಯಾದಿಗಳ ಬಗ್ಗೆ ಯೋಜನಾ ಸಹಾಯಕ ಸಮಾಲೋಚಕ ತಂಡದ ಟೀಮ್ ಲೀಡರ್ ಶ್ರೀ ದೊರೈಸ್ವಾಮಿ ಆರ್. ಅವರು ವಿವರಿಸಿದರು.

ಕೆ.ಎನ್.ಎನ್.ಎಲ್ – ವಿ.ಎನ್.ಸಿ ಯೋಜನಾ ಸಂಯೋಜಕರಾದ ಶ್ರೀ ಎಸ್.ಬಿ. ನಾಗಭೂಶಣ್ ಅವರು ವಿ.ಎನ್.ಸಿ. ಆಧುನೀಕರಣ ಯೋಜನೆಯಡಿಯಲ್ಲಿಯ ವಿವಿಧ ಕಾಮಗಾರಿಗಳನ್ನು ವಿವರಿಸಿದರು ಹಾಗೂ ನೀ.ಬ.ಸ.ಸಂ.ಗಳ ಮೂಲಕ ಕೈಗೊಳ್ಳಬಹುದಾದ ಕಾಡಾ ಕಾಮಗಾರಿಗಳನ್ನು ಸಹ ತಿಳಿಸಿದರು.

ವಡ್ಡರಹಟ್ಟಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶ್ರೀ ಸತ್ಯಪ್ಪ ಅವರು "ಸಂಘಗಳ ಅಧಿಸೂಚನೆ, ನೋಂದಣಿ, ಕಾಮಗಾರಿಗಳ ಅನುಷ್ಠಾನ ಇತ್ಯಾದಿಗಳ ಬಗ್ಗೆ ತಿಳಿಸಿದರು. ಜೊತೆಗೆ ಈ ಎಲ್ಲಾ ಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಯೋಜನಾ ಸಹಾಯಕ ಸಮಾಲೋಚಕ ತಂಡವು ಆಯ್ಕೆಯಾಗಿದ್ದು, ಇದರಲ್ಲಿ ವಿವಿಧ ವಿಷಯ ತಜ್ಞರುಗಳನ್ನು ನೇಮಕ ಮಾಡಲಾಗಿದೆ, ಇವರಿಗೆ ಹೆಚ್ಚು ಸಹಕಾರ ನೀಡಿ ಯಶಸ್ವಿಯಾಗಿ ಯೋಜನೆ ಅನುಷ್ಠಾನಗೊಳಿಸಲು" ಸಂಘಗಳಿಗೆ ತಿಳಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ಸಂಘಗಳ ಸದಸ್ಯರು ಹೊಲಗಾಲುವೆ ವಿನ್ಯಾಸ, ಪ್ರತಿ ಕ್ಯಾಡ್ ಪ್ಯಾಕೇಜಿಗೆ ನಿಗದಿಯಾಗಿರುವ ಮೊತ್ತ, ಸರ್ವೀಸ್ ರಸ್ತೆ ಮತ್ತು ತಪಾಸಣಾ ರಸ್ತೆಗೆ ಗಡಿಕಲ್ಲು ಹಾಕುವುದು, ನಗರ ವ್ಯಾಪ್ತಿಯಲ್ಲಿ ಬರುವ ಸಂಘದ ಕಟ್ಟಡ ನಿರ್ಮಾಣಕ್ಕೆ ನಿವೇಶನ ಪಡೆಯುವ ಬಗ್ಗೆ, ಹೊಲಗಾಲುವೆ ಕಾಮಗಾರಿ ನಿರ್ಮಾಣಕ್ಕೆ ಕಬ್ಬಿಣ ಬಳಸುವ ಬಗ್ಗೆ ಕೆಲವು ಸ್ಪಷ್ಟನೆಗಳನ್ನು ಕೇಳಿದರು.




ಕಾರ್ಯಾಗಾರದಲ್ಲಿ ವಿಜಯನಗರ ಕಾಲುವೆಗಳ 14 ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಹಾಗೂ ಕೆ.ಎನ್.ಎನ್.ಎಲ್ ಇಂಜಿನಿಯರುಗಳು ಭಾಗವಹಿಸಿದ್ದರು. ನೀ.ಬ.ಸ.ಸಂ.ಗಳ ಪ್ರತಿನಿಧಿಯಾದ ಶ್ರೀಯುತರಾದ ಸುದರ್ಶನ ವರ್ಮ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲಿಂಗರಾಜು, ಅಮರೇಶಪ್ಪ, ಹಾಗೂ ಯೋಜನಾ ಸಹಾಯಕ ಸಮಾಲೋಚಕ ತಂಡದ ತಜ್ಞರುಗಳಾದ ಸುಜಿತ್‌ಕುಮಾರ್, ಪ್ರಭಾಕರ್ ಸಿಂಗ್, ಬಾಲಕೃಷ್ಣರಾಜ್ ನೀರ್ಚಲ್, ವೀರೇಶ್ ಎಂ.ಎಂ., ಮಲ್ಲಿಕಾರ್ಜುನ್, ದೀಪಕ್‌ಕುಮಾರ್ ಮತ್ತಿತರರು ಮಾತನಾಡಿದರು.

**ಸಂಪಾದಕೀಯ ಮಂಡಳಿ**

**ಶ್ರೀ ದುರುಗಪ್ಪ ಕೆ.,** ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್

**ಶ್ರೀ ರಮೇಶ್ ರಾಥೋಡ್,** ಆಡಳಿತಾಧಿಕಾರಿಗಳು (ಪ್ರಭಾರ), ತುಂಗಭದ್ರಾ ಕಾಡಾ, ಮುನಿರಾಬಾದ್

**ಶ್ರೀ ದೊರೈಸ್ವಾಮಿ ಆರ್.** ಟೀಮ್ ಲೀಡರ್, ಯೋಜನಾ ಸಹಾಯಕ ಸಮಾಲೋಚಕ ತಂಡ, ಇಜಿಐಎಸ್

**ಶ್ರೀ ಮಲ್ಲಿಕಾರ್ಜುನ,** ಸಂವಹನ ಮತ್ತು ದಾಖಲಾತಿ ತಜ್ಞ, ಯೋಜನಾ ಸಹಾಯಕ ಸಮಾಲೋಚಕ ತಂಡ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ,
5ನೇ ಅಡ್ಡರಸ್ತೆ, ಮೃತ್ಯುಂಜಯನಗರ
ಹೊಸಪೇಟೆ–583201, ವಿಜಯನಗರ ಜಿಲ್ಲೆ

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಠಾನ ಕಛೇರಿ
ಮುನಿರಾಬಾದ್, ಕೊಪ್ಪಳ–583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ
ಮುನಿರಾಬಾದ್, ಕೊಪ್ಪಳ–583233

**1200 ಪ್ರತಿಗಳು**